ಪ್ರೀತಿ ಎಂದರೇನು ?

ಪ್ರೀತಿ ಎಂದರೇನು ?

ಜೆ. ಕೃಷ್ಣಮೂರ್ತಿ



ಪ್ರೀತಿ ಎಂದರೇನು?

(ಲೈಫ್ ಅಹೆಡ್ ಪುಸ್ತಕದ ಆಯ್ದ ಭಾಗಗಳು)

ಪ್ರೀತಿ ಎಂದರೇನು?

(ಲೈಫ್ ಅಹೆಡ್ ಪುಸ್ತಕದ ಆಯ್ದ ಭಾಗಗಳು)

ಜೆ. ಕೃಷ್ಣಮೂರ್ತಿ

ಅನುವಾದ : ಓ.ಎಲ್. ನಾಗಭೂಷಣ ಸ್ವಾಮಿ

ಬೆಂಗಳೂರು ಶಿಕ್ಷಣ ಕೇಂದ್ರ
ಕೃಷ್ಣಮೂರ್ತಿ ಫೌಂಡೇಶನ್ ಇಂಡಿಯಾ, ಬೆಂಗಳೂರು
೨೦೦೫

Preeti Endarenu? : Kannada translation of selected chapters (8-10), from J. Krishnamurti's book : *Life Ahead*

First edition published in 1987

Translation into Kannada : O.L. Nagabhushana Swamy

Rs. 25/-

Design by : Salil Inamdar

Kannada Translation Published by
Bangalore Education Centre
Krishnamurti Foundation India
Thatguni Post, Bangalore - 560 062
Phone 28435243, E-mail : kfistudy@vsnl.com

Printed by
OMKAR OFFSET PRINTERS
No. 3/3, New Tharagupet, Bangalore - 02 Ph : 26708186, 26709026
E-mail : omkar@blr.vsnl.net.in Website : www.omkarprinters.com

ಪ್ರೀತಿ ಎಂದರೇನು?

ನಾವು ಭಯದ ಬಗ್ಗೆ ಬಹಳಷ್ಟು ಮಾತನಾಡಿದ್ದೇವೆ. ಭಯವೆಂಬುದು ನಮ್ಮ ಬದುಕಿನ ಬಹುಮುಖ್ಯ ಅಂಶ. ಈಗ ನಾವು ಪ್ರೀತಿಯ ಬಗ್ಗೆ ಕೊಂಚ ಮಾತನಾಡೋಣ. ನಾವೆಲ್ಲ ಅಷ್ಟು ಮಹತ್ವದ್ದೆಂದು ಭಾವಿಸುವ ಪ್ರೀತಿ ಎಂಬ ಪದದ ಹಿಂದೆ, ಪ್ರೀತಿ ಎಂಬ ಭಾವದ ಹಿಂದೆ ಅಂಜಿಕೆ, ಕಳವಳ, ಮತ್ತು ಬೆಳೆದವರು ಅನುಭವಿಸುವಂಥ ಒಂಟಿತನಗಳು ಇವೆಯೇ ಎಂಬುದನ್ನು ಪರಿಶೀಲಿಸೋಣ.

ಪ್ರೀತಿ ಎಂದರೇನು, ಗೊತ್ತೇ ? ಅಪ್ಪ, ಅಮ್ಮನ ಬಗ್ಗೆ, ಅಣ್ಣ ತಮ್ಮಂದಿರ ಬಗ್ಗೆ, ನಿಮ್ಮ ಮೇಷ್ಟರ ಬಗ್ಗೆ, ಗೆಳೆಯರ ಬಗ್ಗೆ ಪ್ರೀತಿ ಇದೆಯೇ ? ಪ್ರೀತಿಸುವುದೆಂದರೇನು? ತಂದೆ ತಾಯಿಯರನ್ನು ಪ್ರೀತಿಸುತ್ತೇನೆ ಎಂದರೆ ಏನು ಅರ್ಥ? ನಿಮ್ಮ ತಂದೆ ತಾಯಿಯರೊಂದಿಗೆ ಸುರಕ್ಷಿತವಾಗಿರುತ್ತೀರಿ, ನೆಮ್ಮದಿಯಾಗಿರುತ್ತೀರಿ. ಅವರು ನಿಮ್ಮನ್ನು ಕಾಪಾಡುತ್ತಾರೆ, ಊಟ, ಬಟ್ಟೆ, ಇರುವುದಕ್ಕೆ ಮನೆ ಎಲ್ಲವನ್ನೂ ಅವರು ನಿಮಗೆ ಒದಗಿಸುತ್ತಾರೆ. ಅಪ್ಪ ಅಮ್ಮಂದಿರೊಡನೆ ನಿಕಟವಾದ ಸಂಬಂಧವಿದೆ ಎಂದು ಭಾವಿಸುತ್ತೀರಿ, ಅಲ್ಲವೇ ? ಅವರನ್ನು ನಂಬಬಹುದು, ಅಥವ ನಂಬಬಾರದು ಎಂದುಕೊಳ್ಳುತ್ತೀರಿ. ನಿಮ್ಮ ಗೆಳೆಯರೊಡನೆ ಮಾತನಾಡುವಷ್ಟು ಸುಲಭವಾಗಿ, ಸಂತೋಷವಾಗಿ ಅಪ್ಪ ಅಮ್ಮಂದಿರೊಡನೆ ಮಾತನಾಡಲಾರಿರಿ. ಆದರೆ ಅವರ ಬಗ್ಗೆ ಗೌರವವಿರುತ್ತದೆ, ವಿಧೇಯತೆ ಇರುತ್ತದೆ, ಅವರೇ ನಿಮ್ಮ ಮಾರ್ಗದರ್ಶಕರು. ಅವರಿಗೆ ವಯಸ್ಸಾದಾಗ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ ಎಂಬ ಅರಿವು ಇರುತ್ತದೆ. ಅವರಿಗೂ ನಿಮ್ಮ ಬಗ್ಗೆ ಪ್ರೀತಿ ಇರುತ್ತದೆ. ನಿಮ್ಮನ್ನು ಕಾಪಾಡುತ್ತಾರೆ, ಸಹಾಯ ಮಾಡುತ್ತಾರೆ, ದಾರಿ ತೋರಲು ಬಯಸುತ್ತಾರೆ, ಕೊನೆಯ ಪಕ್ಷ ಹಾಗೆ ಹೇಳುತ್ತಿರುತ್ತಾರೆ. ನೀವು ನೈತಿಕವಾದ ಜೀವನ ನಡೆಸಲು ಅನುಕೂಲವಾಗುವಂತೆ, ಯಾವುದೇ ತೊಂದರೆಗೆ ಸಿಲುಕದೆ ಬದುಕಲು ಸಾಧ್ಯವಾಗುವಂತೆ, ನಿಮ್ಮ ಮದುವೆ ಮಾಡಬೇಕು, ನಿಮ್ಮನ್ನು ನೋಡಿಕೊಳ್ಳುವ ಗಂಡನನ್ನೋ, ನಿಮಗೆ ಅಡುಗೆ ಮಾಡಿ

ನಿಮ್ಮ ಮಕ್ಕಳನ್ನು ನೋಡಿಕೊಳ್ಳುವ ಹೆಂಡತಿಯನ್ನೋ ಹುಡುಕಬೇಕು ಎಂದು ತಿಳಿದಿದ್ದಾರೆ. ಇದನ್ನೇ ಪ್ರೀತಿ ಎನ್ನುವುದು, ಅಲ್ಲವೇ ?

ಪ್ರೀತಿ ಎಂದರೆ ಏನೆಂದು ತಕ್ಷಣಕ್ಕೆ ಹೇಳುವುದಕ್ಕೆ ಆಗುವುದಿಲ್ಲ. ಪ್ರೀತಿಯನ್ನು ಮಾತುಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಪ್ರೀತಿ ಇರುವುದು, ದೊರೆಯುವುದು ಸುಲಭವಲ್ಲ. ಆದರೂ ಪ್ರೀತಿ ಇಲ್ಲದಿದ್ದರೆ ಬದುಕು ಬರಡು. ಪ್ರೀತಿ ಇರದಿದ್ದರೆ ಮರ, ಹಕ್ಕಿ, ಗಂಡು ಹೆಣ್ಣುಗಳ ಮುಗುಳ್ನಗೆ, ನದಿಯ ಮೇಲಿನ ಸೇತುವೆ, ದೋಣಿ ನಡೆಸುವ ಅಂಬಿಗ, ಪ್ರಾಣಿಗಳು-ಯಾವುದಕ್ಕೂ ಅರ್ಥವೇ ಇಲ್ಲ. ಪ್ರೀತಿ ಇರದ ಬದುಕು ಆಳವಿರದ ಕೆರೆಯ ಹಾಗೆ. ಆಳವಾದ ನದಿಯಲ್ಲಿ ಸಮೃದ್ಧಿ ಇರುತ್ತದೆ. ಅಸಂಖ್ಯ ಮೀನುಗಳು, ಜಲಚರಗಳು ಬದುಕುತ್ತವೆ. ಆದರೆ ಜೋರಾದ ಬಿಸಿಲಿಗೆ ಆಳವಿಲ್ಲದ ಕೆರೆಯ ನೀರು ಬತ್ತಿ ಕೆಸರು, ಮಣ್ಣು, ಬಗ್ಗಡವಷ್ಟೇ ಉಳಿಯುತ್ತವೆ.

ಬಹುತೇಕ ನಮ್ಮ ಬದುಕು ಆಳವಿರದ ಬದುಕು. ಆದುದರಿಂದಲೇ ಪ್ರೀತಿಯನ್ನು ಅರ್ಥಮಾಡಿಕೊಳ್ಳುವುದು ನಮಗೆ ಅಷ್ಟು ಕಷ್ಟದ ಕೆಲಸವಾಗುತ್ತದೆ. ಎಲ್ಲರೂ ನಮ್ಮನ್ನು ಪ್ರೀತಿಸಬೇಕೆಂದು ಆಸೆಪಡುತ್ತೇವೆ. ನಾವೂ ಪ್ರೀತಿಸಲು ಬಯಸುತ್ತೇವೆ. ಆದರೆ ಪ್ರೀತಿ ಎಂಬ ಪದದ ಹಿಂದೆಯೇ ಭಯ ಸುಳಿಯುತ್ತಿರುತ್ತದೆ. ಈ ಅಸಾಮಾನ್ಯವಾದ ಸಂಗತಿ ಏನು ಎಂಬುದನ್ನು ತಿಳಿಯುವುದು ಮುಖ್ಯವಲ್ಲವೇ ? ಇತರ ಮನುಷ್ಯರನ್ನು ಹೇಗೆ ಕಾಣುತ್ತೇವೆ, ಮರಗಳನ್ನು, ಪ್ರಾಣಿಗಳನ್ನು, ಅಪರಿಚಿತರನ್ನು, ಹಸಿದವರನ್ನು ಹೇಗೆ ಕಾಣುತ್ತೇವೆ ಎಂಬ ಬಗ್ಗೆ ನಮ್ಮಲ್ಲಿ ಎಚ್ಚರವಿದ್ದರೆ ಮಾತ್ರವೇ ಪ್ರೀತಿಯನ್ನು ಕುರಿತು ತಿಳಿಯಬಹುದು. ಗೆಳೆಯರು, ನಮಗೆ ಗುರು ಇದ್ದರೆ ಆ ಗುರು, ಅಪ್ಪ ಅಮ್ಮ ಇವರನ್ನೆಲ್ಲ ಯಾವ ಭಾವದಿಂದ ನೋಡುತ್ತೇವೆ ಎಂಬುದರ ಬಗ್ಗೆ ನಮ್ಮಲ್ಲಿ ಎಚ್ಚರವಿರಬೇಕು.

ಅಪ್ಪ ಅಮ್ಮಂದಿರನ್ನು ಪ್ರೀತಿಸುತ್ತೇನೆ. ಮೇಷ್ಟರ ಬಗ್ಗೆ ನನಗೆ ಬಹಳ ಪ್ರೀತಿ ಇದೆ. ಪೋಷಕರು ನನ್ನ ಪ್ರೀತಿಪಾತ್ರರು ಎಂದೆಲ್ಲ ಹೇಳುತ್ತೇವಲ್ಲ, ಆ ಮಾತುಗಳ ಅರ್ಥವೇನು ? ಯಾರ ಬಗ್ಗೆಯಾದರೂ ನಿಮ್ಮಲ್ಲಿ ಗೌರವವಿದ್ದರೆ, ಆ ಗೌರವದೊಂದಿಗೆ ಅಭಿಮಾನವೂ ಬೆರೆತಿರುತ್ತದೆ. ನೀವು ಗೌರವಿಸುವ, ಅಭಿಮಾನಿಸುವ ವ್ಯಕ್ತಿಗೆ ವಿಧೇಯತೆಯನ್ನು ತೋರುವುದು ನಿಮ್ಮ ಕರ್ತವ್ಯವೆಂದೇ ಭಾವಿಸುತ್ತೀರಿ. ಆ ಇನ್ನೊಬ್ಬ ವ್ಯಕ್ತಿಯೂ ನಿಮ್ಮಿಂದ ವಿಧೇಯತೆಯನ್ನು ಅಪೇಕ್ಷಿಸುತ್ತಾರೆ, ನಿರೀಕ್ಷಿಸುತ್ತಾರೆ. ಇದು ಪ್ರೀತಿಯೆ ? ಪ್ರೀತಿಯಲ್ಲಿ ಭಯವಿರುತ್ತದೆಯೇ ? ಒಬ್ಬರ ಬಗ್ಗೆ ಗೌರವ ಅಭಿಮಾನಗಳನ್ನು ಇಟ್ಟುಕೊಳ್ಳುವಂತೆಯೇ ಇನ್ನೊಬ್ಬರ ಬಗ್ಗೆ ಅಗೌರವ

ಅಪಮಾನದ ಧೋರಣೆಗಳನ್ನೂ ಹೊಂದಿರಬಹುದು. ಅದು ಪ್ರೀತಿಯೆ? ಪ್ರೀತಿಯಲ್ಲಿ ಅಭಿಮಾನ, ಅಪಮಾನ, ವಿಧೇಯತೆಗಳ ಒತ್ತಾಯಕ್ಕೆ ಅವಕಾಶವಿರುತ್ತದೆಯೇ ?

ನಾನು ಇಂಥವರನ್ನು ಪ್ರೀತಿಸುತ್ತೇನೆ ಎಂದಾಗ ನೀವು ಒಳಗೊಳಗೇ ಆ ವ್ಯಕ್ತಿಯ ಮೇಲೆ ಅವಲಂಬಿತರಾಗಿರುತ್ತೀರಲ್ಲವೇ? ನೀವು ಮಕ್ಕಳಾಗಿದ್ದಾಗ ಸಹಜವಾಗಿಯೇ ಅಪ್ಪ ಅಮ್ಮಂದಿರ ಮೇಲೆ, ನಿಮ್ಮ ಮೇಷ್ಟರ ಮೇಲೆ, ನಿಮ್ಮ ಪೋಷಕರ ಮೇಲೆ ಅವಲಂಬಿತರಾಗಿರುತ್ತೀರಿ. ನಿಮಗೆ ಅನ್ನ, ಬಟ್ಟೆ, ವಸತಿಗಳನ್ನು ಒದಗಿಸುವವರು ನಿಮ್ಮನ್ನು ಕಾಪಾಡುವವರು, ನಿಮ್ಮನ್ನು ನೋಡಿಕೊಳ್ಳುವವರು ಒಬ್ಬರಿದ್ದಾರೆ ಎಂಬ ಸುರಕ್ಷಿತ ಭಾವನೆ ಇರಬೇಕು ಎಂದು ಬಯಸುತ್ತೀರಿ.

ಸಾಮಾನ್ಯವಾಗಿ ಏನಾಗುತ್ತದೆ ನೋಡಿ. ನಾವು ದೊಡ್ಡವರಾದಮೇಲೂ ಈ ಅವಲಂಬನೆಯ ಭಾವನೆ ಮುಂದುವರೆಯುತ್ತದೆ. ಅಲ್ಲವೇ? ವಯಸ್ಸಾದವರಲ್ಲಿ ನಿಮ್ಮ ಅಪ್ಪ ಅಮ್ಮಂದಿರಲ್ಲಿ, ಮೇಷ್ಟರುಗಳಲ್ಲಿ ಈ ಭಾವನೆಯನ್ನು ಕಂಡಿಲ್ಲವೇನು? ಹೆಂಡತಿ ಗಂಡನ ಮೇಲೆ, ಗಂಡ ಹೆಂಡತಿಯ ಮೇಲೆ, ಅಪ್ಪ ಅಮ್ಮಂದಿರು ಮಕ್ಕಳ ಮೇಲೆ, ಅಥವ ತಮ್ಮ ತಂದೆತಾಯಿಗಳ ಮೇಲೆ ಮಾನಸಿಕವಾಗಿ ಅವಲಂಬಿಸಿರುವುದನ್ನು ನೀವು ಗಮನಿಸಿಲ್ಲವೇನು ? ದೊಡ್ಡವರಾದ ಮೇಲೂ ಜನ ಮತ್ತೊಬ್ಬರ ಮೇಲೆ ಅವಲಂಬಿತರಾಗಿಯೇ ಇರುತ್ತಾರೆ. ಮನಸ್ಸಿಗೆ ಆಸರೆಯಾಗಿ, ತಮಗೆ ನೆಮ್ಮದಿ ಮತ್ತು ಸುಭದ್ರತೆಯ ಭಾವನೆಗಳನ್ನು ನೀಡುವವರು ಯಾರಾದರೂ ಬೇಕು ಎಂದು ಬಯಸುತ್ತಾರೆ. ಅಂಥವರು ಇರದಿದ್ದರೆ ತಾವು ಒಬ್ಬಂಟಿಗಳಾಗಿಬಿಟ್ಟೆವೆಂದು ನರಳುತ್ತಾರೆ, ಕೊರಗುತ್ತಾರೆ. ಮತ್ತೊಬ್ಬರ ಮೇಲಿನ ಈ ಅವಲಂಬನೆಯನ್ನೇ ಪ್ರೀತಿ ಎನ್ನಲಾಗುತ್ತದೆ. ಆದರೆ ಗಮನವಿಟ್ಟು ನೋಡಿ. ಈ ಅವಲಂಬನೆ ಭಯದಿಂದ ಮೂಡಿದ್ದೇ ಹೊರತು ಅದು ಪ್ರೀತಿಯಲ್ಲ.

ಅನೇಕ ಜನ ತಮ್ಮಷ್ಟಕ್ಕೆ ತಾವು ಇರುವುದಕ್ಕೆ, ಏಕಾಂಗಿಗಳಾಗುವುದಕ್ಕೆ ಅಂಜುತ್ತಾರೆ. ತಾವೇ ಸ್ವತಃ ಆಲೋಚಿಸುವುದಕ್ಕೆ, ಗಹನವಾಗಿ ಭಾವಿಸುವುದಕ್ಕೆ, ಬದುಕಿನ ಅರ್ಥವೇನೆಂದು ಸ್ವತಃ ಅನ್ವೇಷಿಸಿ ಅರಿಯುವುದಕ್ಕೆ ಹೆದರುತ್ತಾರೆ. ಆದ್ದರಿಂದಲೇ ದೇವರ ಮೇಲೆ ತಮಗೆ ಭಕ್ತಿ ಇದೆ, ಪ್ರೀತಿ ಇದೆ ಎಂದೆನ್ನುತ್ತಾರೆ. ದೇವರ ಮೇಲೆ ಅವಲಂಬಿತರಾಗಿರುತ್ತಾರೆ. ತಾವು ದೇವರೆಂದು ಕರೆಯುವ ವಸ್ತುವನ್ನು ನಂಬುತ್ತಾರೆ. ಆದರೆ ಅದು ಅವ್ಯಕ್ತವಾದ ದೇವರಲ್ಲ ಅವರ ಮನಸ್ಸುಗಳೇ ಸೃಷ್ಟಿಸಿಕೊಂಡಿರುವ ದೇವರು.

ಆದರ್ಶ ಅಥವ ನಂಬಿಕೆಗಳ ವಿಷಯವೂ ಹೀಗೆಯೇ. ನಾನು ಯಾವುದಾದರೂ ನಂಬಿಕೆ ಇಟ್ಟುಕೊಂಡಿದ್ದರೆ, ಆದರ್ಶಕ್ಕೆ ಬದ್ಧವಾಗಿದ್ದರೆ ಅದರಿಂದ ತುಂಬ ನೆಮ್ಮದಿ ದೊರೆಯುತ್ತದೆ. ನನ್ನ ನಂಬಿಕೆ, ಆದರ್ಶಗಳು ಇಲ್ಲವಾಗಿಬಿಟ್ಟರೆ ದಿಕ್ಕುತಪ್ಪಿದವನಂತಾಗಿಬಿಡುತ್ತೇನೆ. ಗುರುವಿನ ವಿಷಯವೂ ಹೀಗೆಯೇ. ಗುರುವಿನಿಂದ ಏನನ್ನೋ ಪಡೆಯಲು, ಸ್ವೀಕರಿಸಲು ಬಯಸಿರುತ್ತೇನೆ. ಆದುದರಿಂದಲೇ ಮನಸ್ಸಿನ ಮೂಲೆಯಲ್ಲಿ ಗುರುವಿನ ಬಗ್ಗೆ ಭಯವೂ ಇರುತ್ತದೆ. ನಿಮ್ಮ ಅಪ್ಪ ಅಮ್ಮಂದಿರು, ಮೇಷ್ಟರುಗಳ ಮೇಲಿನ ಅವಲಂಬನೆಯೂ ಇದೇ ರೀತಿಯದು. ನೀವು ಚಿಕ್ಕವರಾಗಿರುವಾಗ ಅವಲಂಬನೆ ಸಹಜ ಮತ್ತು ಸರಿ ಕೂಡ. ನೀವು ಬೆಳೆದು ದೊಡ್ಡವರಾಗಿ ಪ್ರಬುದ್ಧರಾದಮೇಲೆ ಕೂಡ ಅವಲಂಬಿತರೇ ಆಗಿದ್ದರೆ ಸ್ವಂತವಾಗಿ ಯೋಚಿಸಲಾರಿರಿ, ಸ್ವತಂತ್ರವಾಗಲಾರಿರಿ. ಅವಲಂಬನೆ ಇದ್ದಾಗ ಭಯವಿರುತ್ತದೆ. ಭಯವಿದ್ದಾಗ ಅಧಿಕಾರ, ವಿಧೇಯತೆಗಳು ಹುಟ್ಟಿಕೊಳ್ಳುತ್ತವೆ. ಆಗ ಪ್ರೀತಿ ಇರುವುದಿಲ್ಲ. ನೀವು ಸದಾ ವಿಧೇಯರಾಗಿರಬೇಕು, ಕೆಲವು ಸಂಪ್ರದಾಯಗಳನ್ನು ಪಾಲಿಸಬೇಕು, ಇಂಥದ್ದೇ ಕೆಲಸಕ್ಕೆ ನೀವು ಸೇರಬೇಕು ಎಂದು ನಿಮ್ಮ ತಂದೆ ತಾಯಿ ಮಾಡುವ ಒತ್ತಾಯದಲ್ಲಿ ಪ್ರೀತಿ ಇರುವುದಿಲ್ಲ. ಸಮಾಜದ ವ್ಯವಸ್ಥೆಯನ್ನು ಅದು ಇರುವಂತೆಯೇ ಒಪ್ಪಿಕೊಂಡು, ಪ್ರಶ್ನಿಸದೆ ಅವಲಂಬಿಸಿಕೊಂಡಿರುವುದರಲ್ಲಿ ಕೂಡ ಪ್ರೀತಿ ಇರುವುದಿಲ್ಲ.

ಮಹತ್ವಾಕಾಂಕ್ಷಿಗಳಾದವರಿಗೆ ಪ್ರೀತಿ ಎಂದರೇನೆಂದು ತಿಳಿದಿರುವುದಿಲ್ಲ. ಮಹತ್ವಾಕಾಂಕ್ಷಿಗಳಾದವರು ನಮ್ಮನ್ನು ಆಳುತ್ತಿರುತ್ತಾರೆ. ಆದ್ದರಿಂದಲೇ ಜಗತ್ತಿನಲ್ಲಿ ಇಷ್ಟೊಂದು ದುಃಖ ಇದೆ. ಆದ್ದರಿಂದಲೇ ನೀವು ಬೆಳೆಯುತ್ತಿರುವಂತೆಯೇ ಇದನ್ನೆಲ್ಲ ಸ್ವತಃ ಕಂಡು ಅರ್ಥಮಾಡಿಕೊಳ್ಳುವುದು, ಸಾಧ್ಯವಾದರೆ ಪ್ರೀತಿ ಎಂದರೇನು ಎಂದು ಕಂಡುಕೊಳ್ಳುವುದು ಮುಖ್ಯವಾಗುತ್ತದೆ. ನಿಮಗೆ ಒಳ್ಳೆಯ ಕೆಲಸ, ದೊಡ್ಡ ಅಂತಸ್ತು, ಸುಂದರವಾದ ಮನೆ, ಮನೆಯ ಮುಂದೆ ಚೆಲುವಾದ ತೋಟ, ಅತ್ಯುತ್ತಮ ಬಟ್ಟೆ-ಬರೆ ಎಲ್ಲವೂ ಇರಬಹುದು. ದೇಶದ ಪ್ರಧಾನಿಯೇ ನೀವಾಗಿರಬಹುದು. ಆದರೆ ಪ್ರೀತಿ ಇರದಿದ್ದರೆ ಇವಕ್ಕೆಲ್ಲ ಯಾವ ಅರ್ಥವೂ ಇಲ್ಲ.

ನಿಮ್ಮ ಅಪ್ಪ ಅಮ್ಮಂದಿರೊಡನೆ ಇರುವ ಸಂಬಂಧ, ನಿಮ್ಮ ಅಧ್ಯಾಪಕರೊಡನೆ ಇರುವ ಸಂಬಂಧ, ನಿಮ್ಮ ಗುರುಗಳೊಡನೆ ಇರುವ ಸಂಬಂಧ ಇವುಗಳನ್ನೆಲ್ಲ ನೀವು ಹೇಗೆ ಭಾವಿಸುತ್ತೀರಿ ಎಂಬುದನ್ನು ಕಂಡುಕೊಳ್ಳಲು ಈಗಲೇ ತೊಡಗಬೇಕು. ದೊಡ್ಡವರಾದಮೇಲೆ ಇದನ್ನೆಲ್ಲ ಮಾಡೋಣ ಎಂದು ಮುಂದೂಡಬೇಡಿ. ದೊಡ್ಡವರಾದಮೇಲೆ ಇದನ್ನೆಲ್ಲ ತಿಳಿಯಲು ನಿಮಗೆ ಸಾಧ್ಯವಾಗುವುದೇ ಇಲ್ಲ. 'ಪ್ರೀತಿ'

ಎಂಬ ಪದವನ್ನು, ಅಥವಾ ಯಾವುದೇ ಪದವನ್ನು ಸುಮ್ಮನೆ ಒಪ್ಪಿಕೊಳ್ಳಬೇಡಿ. ಪದಗಳ ಹಿಂದೆ ಇರುವ ವಾಸ್ತವವನ್ನು ಕಾಣುವುದಕ್ಕೆ ನಿಮಗೆ ಸಾಧ್ಯವಾಗಬೇಕು. ವಾಸ್ತವವೆಂಬುದು ನಿಮ್ಮ ನಿಜವಾದ ಭಾವದಲ್ಲಿದೆ. ನೀವು ಏನನ್ನು ಭಾವಿಸಬೇಕೆಂದು ಹೇಳಲಾಗುತ್ತದೋ ಅದು ವಾಸ್ತವವಲ್ಲ. ನಿಮ್ಮಲ್ಲಿ ನಿಜವಾಗಿಯೂ ಅಸೂಯೆ ಅಥವ ಕೋಪವಿದ್ದರೆ 'ನನ್ನಲ್ಲಿ ಅಸೂಯೆ ಇರಬಾರದು.' 'ನನ್ನಲ್ಲಿ ಕೋಪವಿರಬಾರದು' ಎಂದುಕೊಳ್ಳುವುದು ವಾಸ್ತವವಲ್ಲ. ಆಯಾ ಕ್ಷಣದಲ್ಲಿ ನೀವು ಏನನ್ನು ಭಾವಿಸುತ್ತಿದ್ದೀರೋ ಅದನ್ನು ಪ್ರಾಮಾಣಿಕವಾಗಿ, ಸ್ಪಷ್ಟವಾಗಿ, ಖಚಿತವಾಗಿ ಕಾಣುವುದು ಮುಖ್ಯವೇ ಹೊರತು ಹೇಗೆ ಭಾವಿಸಬೇಕು, ಮುಂದೆ ಎಂದೋ ಹೇಗೆ ಇರಬೇಕು ಎಂಬ ಆದರ್ಶಗಳನ್ನು ಕುರಿತು ಚಿಂತಿಸುವುದಲ್ಲ. ಆಗ ಮಾತ್ರ ನೀವು ಏನನ್ನಾದರೂ ಮಾಡಲು ಸಾಧ್ಯವಾಗುತ್ತದೆ. 'ಅಪ್ಪ ಅಮ್ಮಂದಿರನ್ನು ಪ್ರೀತಿಸಲೇಬೇಕು,' 'ಉಪಾಧ್ಯಾಯರನ್ನು ಪ್ರೀತಿಸಲೇಬೇಕು' ಎಂಬ ಮಾತುಗಳಿಗೆ ಯಾವ ಅರ್ಥವೂ ಇಲ್ಲ. ಏಕೆಂದರೆ ನಿಮ್ಮ ನಿಜ ಭಾವಗಳು ಬೇರೆಯಾಗಿರುತ್ತವೆ, ನೀವು ಮಾತ್ರ ಈ ಪದಗಳ ತೆರೆಯ ಹಿಂದೆ ಅವಿತುಕೊಂಡಿರುತ್ತೀರಿ,

ಪದಗಳಿಗೆ ಇರುವ ಒಪ್ಪಿತವಾದ, ಸ್ವೀಕೃತವಾದ ಅರ್ಥಗಳ ಆಚೆಗೆ ನೋಡುವುದು ವಿವೇಕದ ದಾರಿಯಲ್ಲವೆ? ಕರ್ತವ್ಯ, ಪ್ರೀತಿ, ಜವಾಬ್ದಾರಿ, ದೇವರು ಇಂಥ ಪದಗಳಿಗೆ ಸಾಂಪ್ರದಾಯಿಕ ಅರ್ಥಗಳಿವೆ. ಆದರೆ ವಿವೇಕಿಯಾದ ಮನುಷ್ಯ, ನಿಜವಾಗಿ ಶಿಕ್ಷಿತನಾದ ಮನುಷ್ಯ, ಇಂಥ ಪದಗಳ ಸಾಂಪ್ರದಾಯಿಕ ಅರ್ಥದ ಆಚೆಗೆ ನೋಡಬಲ್ಲವನಾಗಿರುತ್ತಾನೆ. ಉದಾಹರಣೆಗೆ, ಯಾರಾದರೊಬ್ಬರು ನಿಮ್ಮ ಬಳಿ ಬಂದು ತನಗೆ ದೇವರಲ್ಲಿ ನಂಬಿಕೆಯಿಲ್ಲವೆಂದು ಹೇಳಿದರೆ ನಿಮಗೆ ಷಾಕ್ ಆಗಬಹುದು. ಅಲ್ಲವೇ? ಆ ಮಾತನ್ನು ಕೇಳಿ, ದೇವರನ್ನು ನಂಬುವ, ಅಥವ ನಂಬುತ್ತೇನೆಂದುಕೊಂಡಿರುವ ನೀವು 'ಅಯ್ಯಯ್ಯೋ' ಎಂಬ ಉದ್ಗಾರವನ್ನೂ ತೆಗೆಯಬಹುದು. ಆದರೆ ನಂಬಿಕೆ ಮತ್ತು ಅಪನಂಬಿಕೆಗಳಿಗೆ ಇರುವ ಅರ್ಥ ಏನೇನೂ ಇಲ್ಲವೆನ್ನುವಷ್ಟು ಅಲ್ಪವಾದದ್ದು.

'ಪ್ರೀತಿ' ಎಂಬ ಪದವನ್ನು ದಾಟಿ ಅದರಾಚೆಗೆ, ನೀವು ನಿಜವಾಗಿಯೂ ನಿಮ್ಮ ಅಪ್ಪ ಅಮ್ಮಂದಿರನ್ನು ಪ್ರೀತಿಸುತ್ತೀರೋ ಹೇಗೆ, ನಿಮ್ಮ ತಂದೆ ತಾಯಿಗಳು ನಿಮ್ಮನ್ನು ನಿಜವಾಗಿಯೂ ಪ್ರೀತಿಸುತ್ತಾರೆಯೋ ಹೇಗೆ ಎಂಬುದನ್ನು ಕಂಡುಕೊಳ್ಳುವುದು

ಮುಖ್ಯ. ನೀವು ಮತ್ತು ನಿಮ್ಮ ತಂದೆತಾಯಿಯರು ಒಬ್ಬರನ್ನೊಬ್ಬರು ಪರಸ್ಪರ ಪ್ರೀತಿಸಿದ್ದಿದ್ದರೆ ಈ ಜಗತ್ತು ಸಂಪೂರ್ಣವಾಗಿ ಬೇರೆಯ ರೀತಿಯಲ್ಲಿರುತ್ತಿತ್ತು. ಯುದ್ಧವಿರುತ್ತಿರಲಿಲ್ಲ, ಹಸಿವೆ ಇರುತ್ತಿರಲಿಲ್ಲ, ಬಡವ-ಬಲ್ಲಿದ ಎಂಬ ವರ್ಗ ವ್ಯತ್ಯಾಸಗಳಿರುತ್ತಿರಲಿಲ್ಲ. ಪ್ರೀತಿ ಇಲ್ಲದೆ, ಕೇವಲ ಆರ್ಥಿಕವಾಗಿ ಸಮಾಜವನ್ನು ಸುಧಾರಿಸುವುದಕ್ಕೆ ಪ್ರಯತ್ನಿಸುತ್ತೇವೆ. ಆದರೆ ನಮ್ಮ ಹೃದಯದಲ್ಲಿ ಪ್ರೀತಿ ಇರದಿದ್ದರೆ ಸಂಘರ್ಷ ಮತ್ತು ಕಾರ್ಪಣ್ಯಗಳಿರದ ಸಾಮಾಜಿಕ ರಚನೆಯನ್ನು ನಿರ್ಮಿಸಿಕೊಳ್ಳುವುದು ಅಸಾಧ್ಯವಾಗುತ್ತದೆ. ಆದುದರಿಂದಲೇ ಈ ಸಂಗತಿಗಳನ್ನು ಆಳವಾಗಿ ಪರಿಶೀಲಿಸುವುದು ಅಗತ್ಯ. ಅಂಥ ಪರಿಶೀಲನೆಯಿಂದಲೇ ಪ್ರೀತಿಯೆಂದರೆ ಏನೆಂಬುದನ್ನು ಕಂಡುಕೊಳ್ಳುತ್ತೇವೆ.

ಪ್ರಶ್ನೆ: ಈ ಜಗತ್ತಿನಲ್ಲಿ ದುಃಖ ಮತ್ತು ಕಷ್ಟ ಕಾರ್ಪಣ್ಯಗಳು ಏಕೆ ಇವೆ?

ಕೃಷ್ಣಮೂರ್ತಿ : ಈ ಪ್ರಶ್ನೆಯನ್ನು ಕೇಳುತ್ತಿರುವ ಹುಡುಗನಿಗೆ ದುಃಖ ಮತ್ತು ಕಷ್ಟ ಕಾರ್ಪಣ್ಯ ಎಂಬ ಮಾತುಗಳ ಅರ್ಥ ಗೊತ್ತಿದೆಯೋ ಇಲ್ಲವೋ! ಅತಿಯಾದ ಭಾರವನ್ನು ಹೊತ್ತು ನಡೆಯುತ್ತಿರುವ ಕತ್ತೆಯನ್ನು ಕಂಡಿರಬಹುದು; ಯಾವುದೋ ಮಗು ಅಳುತ್ತಿರುವುದನ್ನು ನೋಡಿರಬಹುದು; ಅವನೆದುರಿಗೆ ಯಾರೋ ತಾಯಿ ಮಗುವನ್ನು ಹೊಡೆದಿರಬಹುದು. ಬಹುಶಃ ದೊಡ್ಡವರು ಜಗಳವಾಡುತ್ತಿರುವುದನ್ನು ನೋಡಿದ್ದಾನೆಯೋ ಏನೋ. ಭಿಕ್ಷುಕರು ಕಂಡಿರುತ್ತಾರೆ, ಮುದುಕರು ಕಂಡಿರುತ್ತಾರೆ, ಸತ್ತವರನ್ನು ಸುಡುವುದು ಕಂಡಿರುತ್ತದೆ. ಆದ್ದರಿಂದಲೇ 'ದುಃಖ ಏಕಿದೆ' ಎಂದು ಕೇಳುತ್ತಿದ್ದಾನೆ. ನಿಮಗೂ ಇದನ್ನು ತಿಳಿಯಬೇಕೆನ್ನಿಸುತ್ತದೆಯೇ? ನಿಮ್ಮ ದುಃಖದ ಕಾರಣ ಏನಿರಬಹುದೆಂದು ಎಂದಾದರೂ ಕೇಳಿಕೊಂಡಿದ್ದೀರಾ? ದುಃಖವೆಂದರೇನು? ಜಗತ್ತಿನಲ್ಲಿ ದುಃಖ ಏಕಿದೆ? ನಾನು ಬಯಸಿದ್ದು ನನಗೆ ದೊರಕದಿದ್ದರೆ ದುಃಖವಾಗುತ್ತದೆ. ಹೆಚ್ಚು ಹಣ ಬೇಕು, ಹೆಚ್ಚು ಸೀರೆಗಳು, ಬಟ್ಟೆಬರೆಗಳು ಬೇಕು, ನಾನು ಹೆಚ್ಚು ಸುಂದರವಾಗಿರಬೇಕು ಎಂದೆಲ್ಲ ಬಯಸುತ್ತೇನೆ. ನಾನು ಬಯಸಿದ್ದು ದೊರಕದೆ ಇದ್ದಾಗ ಅಸಂತೋಷ ಉಂಟಾಗುತ್ತದೆ. ನಾನು ಒಬ್ಬರನ್ನು ಪ್ರೀತಿಸಿ ಅವರು ನನ್ನನ್ನು ಪ್ರೀತಿಸದಿದ್ದಾಗ ಕಸಿಪಿಸಿ, ತಳಮಳಗಳು ಉಂಟಾಗುತ್ತವೆ. ನನ್ನ ತಂದೆ ಸತ್ತು ಹೋದರೆ ದುಃಖವಾಗುತ್ತದೆ.

ನಾವು ಬಯಸಿದ್ದು ನಮಗೆ ದೊರೆಯದೆ ಹೋದಾಗ ಅಸಂತೋಷ ಉಂಟಾಗುವುದು ಏಕೆ? ನಾವು ಬಯಸಿದ್ದೆಲ್ಲ ಸಿಗಲೇ ಬೇಕೆ? ನಾವು ಇಷ್ಟಪಟ್ಟದ್ದೆಲ್ಲ

ಸಿಗಬೇಕಾದದ್ದು ನಮ್ಮ ಹಕ್ಕು ಎಂದು ಭಾವಿಸುತ್ತೇವೆ. ಜಗತ್ತಿನ ಮಿಲಿಯಗಟ್ಟಲೆ ಜನಕ್ಕೆ ಅಗತ್ಯವಾಗಿ ಬೇಕಾದದ್ದು ಕೂಡ ದೊರೆಯದೆ ಇರುವಾಗ ನಾನು ಬಯಸಿದ್ದೆಲ್ಲ ಸಿಗಲೇಬೇಕು ಯಾಕೆ ? ಎಲ್ಲರಿಗೂ ಹೊಟ್ಟೆಗೆ ಅನ್ನ ಬೇಕು, ಮೈಗೆ ಬಟ್ಟೆ ಬೇಕು, ಇರಲು ಮನೆ ಬೇಕು. ಆದರೆ ಇವಿಷ್ಟರಿಂದ ನಾವು ತೃಪ್ತರಾಗುವುದಿಲ್ಲ. ಹೆಚ್ಚಿನದು ಏನೇನನ್ನೋ ಬಯಸುತ್ತೇವೆ. ಯಶಸ್ಸು ಬೇಕು, ಜನ ನಮ್ಮನ್ನು ಗೌರವಿಸಬೇಕು, ಪ್ರೀತಿಸಬೇಕು, ಪೂಜ್ಯತೆಯಿಂದ ಕಾಣಬೇಕು ಎಂದು ಬಯಸುತ್ತೇವೆ. ಅಧಿಕಾರಕ್ಕಾಗಿ ಹಾತೊರೆಯುತ್ತೇವೆ. ದೊಡ್ಡ ಕವಿಗಳಾಗಬೇಕು, ಸಂತರಾಗಬೇಕು, ವಾಗ್ಮಿಗಳಾಗಬೇಕು ಎಂದು, ಪ್ರಧಾನಿಗಳು, ಅಧ್ಯಕ್ಷರು ಆಗಬೇಕೆಂದು ಆಸೆಪಡುತ್ತೇವೆ. ಯಾಕೆ ? ಈ ಬಗ್ಗೆ ಎಂದಾದರೂ ಯೋಚಿಸಿದ್ದೀರಾ? ನಾವು ಇವೆಲ್ಲ ಯಾಕೆ ಆಗಬೇಕು? ನಮ್ಮಲ್ಲಿರುವುದರಿಂದಲೇ ತೃಪ್ತರಾಗಬೇಕೆಂದು ನನ್ನ ಮಾತಿನ ಅರ್ಥವಲ್ಲ. ಹಾಗಿರುವುದು ವಿಕೃತಿಯಾಗುತ್ತದೆ, ಮೂರ್ಖತನವಾಗುತ್ತದೆ. ಇನ್ನೂ ಹೆಚ್ಚು ಬೇಕು, ಮತ್ತಷ್ಟು ಹೆಚ್ಚಿಗೆ ಬೇಕು ಎಂದು ಕೊರಗುವುದು, ಹಂಬಲಿಸುವುದು ಏಕೆ? ಈ ಕೊರಗು, ಈ ಹಂಬಲ ನಾವು ಅತೃಪ್ತರು ಎಂಬುದನ್ನು ಸೂಚಿಸುತ್ತದೆ. ಯಾವುದರ ಬಗ್ಗೆ ಈ ಅತೃಪ್ತಿ? ನಾನು 'ಹೀಗಿದ್ದೇನೆ.' ಇದು ನನಗೆ ಇಷ್ಟವಿಲ್ಲ. ನಾನು 'ಹಾಗಿರಬೇಕು' ಎಂದು ಬಯಸುತ್ತೇನೆ. ಹೊಸ ಕೋಟಿನಲ್ಲೋ ಸೀರೆಯಲ್ಲೋ ಚೆಂದಕಾಣುತ್ತೇನೆಂದು ಹೊಸಬಟ್ಟೆಗಳನ್ನು ಬಯಸುತ್ತೇನೆ. ಅಂದರೆ, ನಾನು ಏನಾಗಿದ್ದೇನೋ ಅದರ ಬಗ್ಗೆ ಅತೃಪ್ತಿ ಇದೆ. ಆ ಅತೃಪ್ತಿಯಿಂದ ತಪ್ಪಿಸಿಕೊಳ್ಳುವುದಕ್ಕೆ ನನಗೆ ಹೊಸ ಬಟ್ಟೆ ಬೇಕು, ಅಧಿಕಾರ ಬೇಕು, ಇತ್ಯಾದಿ ಬೇಕುಗಳು ಹುಟ್ಟಿಕೊಳ್ಳುತ್ತವೆ. ಅವೆಲ್ಲ ದೊರೆತರೂ ಅತೃಪ್ತಿ ಹಾಗೆಯೇ ಇರುತ್ತದಲ್ಲವೆ ? ಆ ಅತೃಪ್ತಿಗೆ ಹೊಸ ಬಟ್ಟೆ ತೊಡಿಸಿದ್ದೇನೆ, ಅಧಿಕಾರ ಕೊಡಿಸಿದ್ದೇನೆ, ಕಾರು ಕೊಂಡಿದ್ದೇನೆ, ಅಷ್ಟೆ.

ನಾವು ಏನಾಗಿದ್ದೇವೆಂಬುದನ್ನು ಅರ್ಥಮಾಡಿಕೊಳ್ಳುವುದು ಹೇಗೆ-ಇದನ್ನು ಕಂಡುಕೊಳ್ಳಬೇಕು. ಅಧಿಕಾರ ಅಂತಸ್ತು ಇತ್ಯಾದಿಗಳಿಂದ ನಮ್ಮನ್ನು ನಾವು ಅಲಂಕರಿಸಿಕೊಳ್ಳುವುದು ಅರ್ಥಹೀನವಾದದ್ದು. ಏಕೆಂದರೆ ಅವನ್ನೆಲ್ಲ ಪಡೆದುಕೊಂಡಮೇಲೂ ನಾವು ಅಸುಖಿಗಳಾಗಿಯೇ ಇರುತ್ತೇವೆ. ಇದನ್ನು ಕಂಡ ಅಸುಖಿಯಾದ, ದುಃಖಿಯಾದ ಮನುಷ್ಯ. . . ತನ್ನ ಸಂಪತ್ತಿನ ಹಿಂದೆ, ಅಂತಸ್ತಿನ ಹಿಂದೆ ಅಡಗಿಕೊಳ್ಳುವುದಕ್ಕಿಂತ ತನ್ನ ದುಃಖದ ಹಿಂದೇನಿದೆ, ದುಃಖದ ಮೂಲವೇನು ಎಂದು ಕಂಡುಕೊಳ್ಳಲು ಬಯಸುತ್ತಾನೆ. ನಿಮ್ಮ ದುಃಖದ ಹಿಂದೆ ಹೋಗಿ ನೋಡಿದಾಗ ನೀವು ಕುಬ್ಜರೂ ಖಾಲಿಯಾಗಿರುವವರೂ ಪರಿಮಿತರೂ ಆಗಿರುವುದು ತಿಳಿಯುತ್ತದೆ.

ಅಪ್ರಬುದ್ಧರಾದಷ್ಟೂ ಕಾಪಿ ಮಾಡುವ ಆಸೆ ಹುಟ್ಟುತ್ತದೆ. ಜನಕ್ಕೆ ಯೂನಿಫಾರಂ ಕಂಡರೆ ಎಷ್ಟು ಇಷ್ಟ ನೋಡು. ನೀನು ಏಕೆ ಪೂಜೆ ಮಾಡಬಾರದು ಎಂದು ಕೇಳುವ ಮುನ್ನ ದೊಡ್ಡವರು 'ಯಾಕೆ' ಪೂಜೆ ಮಾಡುತ್ತಾರೆ ಎಂದು ಕೇಳಿ ನೋಡು. ಮೊದಲನೆಯದಾಗಿ ಪೂಜೆ ಒಂದು ಸಂಪ್ರದಾಯ. ಅವರ ಅಜ್ಜ ಮುತ್ತಜ್ಜಂದಿರು ಪೂಜೆ ಮಾಡಿದ್ದರು, ನಿನ್ನ ಹಿರಿಯರೂ ಮಾಡುತ್ತಿದ್ದಾರೆ. ಮತ್ತೆ ಇನ್ನೊಂದು ಕಾರಣವೆಂದರೆ, ಕೆಲವು ಪದಗಳನ್ನು, ಶ್ಲೋಕಗಳನ್ನು ಸತತವಾಗಿ ಪುನರುಚ್ಚರಿಸುವುದರಿಂದ ಅವರ ಮನಸ್ಸಿನಲ್ಲಿ ಶಾಂತಿಯ ಭಾವನೆ ಮೂಡುತ್ತದೆ. ತಿಳಿಯಿತೆ? ಒಂದೇ ಪದವನ್ನು ಮತ್ತೆ ಮತ್ತೆ ಸತತವಾಗಿ ಹೇಳಿಕೊಳ್ಳುತ್ತಿದ್ದರೆ ಮನಸ್ಸು ಡಲ್ ಆಗುತ್ತದೆ. ಆದರಿಂದ ಶಾಂತಿಯ ಭಾವ ಮೂಡುತ್ತದೆ. ವಿಶೇಷವಾಗಿ ಸಂಸ್ಕೃತ ಪದಗಳಿಗೆ ಶಾಂತಿಯ ಭಾವವನ್ನು ಹುಟ್ಟಿಸುವ ಸ್ಪಂದನಶಕ್ತಿ ಇದೆ. ಎಲ್ಲರೂ ಪೂಜೆ ಮಾಡುತ್ತಾರೆಂದು ನಿನ್ನ ಹಿರಿಯರೂ ಪೂಜೆ ಮಾಡುತ್ತಾರೆ. ಚಿಕ್ಕವನಾದ ನೀನು ಕೂಡ ಅವರನ್ನು ಕಾಪಿ ಮಾಡಲು ಬಯಸುತ್ತೀಯೆ. ಪೂಜೆ ಮಾಡುವುದು ಸರಿಯೆಂದು ಯಾರೋ ಹೇಳಿದರೆಂದು ಪೂಜೆ ಮಾಡಲು ಬಯಸುತ್ತೀಯೇನು ? ಕೆಲವು ಪದಗಳನ್ನು ಮತೆ ಮತ್ತೆ ಹೇಳಿಕೊಳ್ಳುವುದರಿಂದ ಮನಸ್ಸಿಗೆ ಲಾಲಿ ಹಾಡಿದಂತೆ ಆಗುವ ಅನುಭವವನ್ನು ಇಷ್ಟಪಡುತ್ತೀಯೇನು ? ಏನೇ ಕಾರ್ಯವನ್ನು ಮಾಡುವ ಮೊದಲು ಅದನ್ನು ಏಕೆ ಮಾಡಲು ಬಯಸುವೆ ಎಂಬುದನ್ನು ಕಂಡುಕೊಳ್ಳಬೇಕಲ್ಲವೇ ? ಮಿಲಿಯಗಟ್ಟಲೆ ಜನ ಪೂಜೆಯನ್ನು ಮಾಡಿದ್ದರೂ ಅದರ ನಿಜವಾದ ಮಹತ್ವವನ್ನು ನಿನ್ನ ಮನಸ್ಸಿನಲ್ಲಿಯೇ ಕಂಡುಕೊಳ್ಳಬೇಕಲ್ಲವೇ?

ನೋಡಿ, ಕೆಲವು ಸಂಸ್ಕೃತ ಪದಗಳನ್ನು ಉಚ್ಚರಿಸುವುದರಿಂದ, ಕೆಲವು ಅಂಗಭಂಗಿಗಳನ್ನು ರಿಪೀಟ್ ಮಾಡುವುದರಿಂದ ಸತ್ಯವನ್ನು, ದೇವರನ್ನು ಕಂಡುಕೊಳ್ಳಲು ಸಾಧ್ಯವಿಲ್ಲ. ಸತ್ಯವನ್ನು ಕಾಣುವುದಿದ್ದರೆ ಧ್ಯಾನ ಮಾಡುವುದು ತಿಳಿದಿರಬೇಕು. ಅದು ಪೂಜೆಗಿಂತ ತೀರ ಬೇರೆಯಾದದ್ದು. ಮಿಲಿಯಗಟ್ಟಲೆ ಜನ ಪೂಜೆ ಮಾಡುತ್ತ ಬಂದಿದ್ದಾರೆ. ಅದರಿಂದ ಜಗತ್ತಿನಲ್ಲಿ ಸುಖ, ಸಮೃದ್ಧಿ ಉಂಟಾಗಿದೆಯೇನು? ಪೂಜೆ ಮಾಡುವ ಜನ ಸೃಜನಶೀಲರೇನು ? ಸೃಜನಶೀಲವಾಗಿರುವುದೆಂದರೆ ಉತ್ಸಾಹ, ಪ್ರೀತಿ, ಕರುಣೆ, ಕಳಕಳಿ, ಇವನ್ನೆಲ್ಲ ಹೊಂದಿರುವುದು ಎಂದರ್ಥ. ಚಿಕ್ಕ ಹುಡುಗನಾಗಿರುವಾಗಲೇ ಪೂಜೆ ಮಾಡಲು ತೊಡಗಿದರೆ ನೀನೂ ಒಂದು ಯಂತ್ರವೇ ಆಗಿಬಿಡುತ್ತೀಯೆ. ಪ್ರಶ್ನಿಸಲು ತೊಡಗಿದರೆ, ಅನುಮಾನಿಸಲು ತೊಡಗಿದರೆ, ಪರಿಶೀಲಿಸಲು ತೊಡಗಿದರೆ, ಬಹುಶಃ ಆಗ, ಧ್ಯಾನವನ್ನು ಮಾಡುವ ವಿಧಾನ ನಿನಗೆ ಹೊಳೆದೀತು. ಸರಿಯಾಗಿ ಧ್ಯಾನಮಾಡುವುದಕ್ಕೆ ಸಾಧ್ಯವಾದರೆ ಅದು ಅತಿ ಶ್ರೇಷ್ಠವಾದ ವರ.

ನಿಮ್ಮ ಮನಸ್ಸನ್ನು ತಿಳಿಯಿರಿ

ಮನಸ್ಸು ಎಂದು ಕರೆಯಲಾಗುವ ಆ ಜಟಿಲ ಸಮಸ್ಯೆಯನ್ನು ಅರ್ಥಮಾಡಿಕೊಳ್ಳದಿದ್ದರೆ ಪ್ರೀತಿಯ ಸಮಸ್ಯೆಯ ಸಂಕೀರ್ಣತೆಯೂ ಅರ್ಥವಾಗುವುದಿಲ್ಲ. ಚಿಕ್ಕವರಾಗಿದ್ದಾಗ ನಮ್ಮಲ್ಲಿ ಎಂಥ ಕುತೂಹಲ ತುಂಬಿರುತ್ತದೆ ಎಂದು ಗಮನಿಸಿದ್ದೀರಲ್ಲವೆ ? ನಮ್ಮಲ್ಲಿ ತಿಳಿಯುವ ಕುತೂಹಲ ಇರುತ್ತದೆ. ಮಕ್ಕಳು ದೊಡ್ಡವರಿಗಿಂತ ಹೆಚ್ಚಿನ ಸಂಗತಿಗಳನ್ನು ಗಮನಿಸುತ್ತವೆ. ಮಕ್ಕಳು ಎಚ್ಚರವಾಗಿರುವಾಗ ದೊಡ್ಡವರು ಎಂದೂ ಗಮನಿಸದೆಯೇ ಇರುವ ಸಂಗತಿಗಳನ್ನೆಲ್ಲ ಕಾಣುತ್ತಿರುತ್ತಾರೆ. ನಾವು ಚಿಕ್ಕವರಾಗಿದ್ದಾಗ ಮನಸ್ಸು ಹೆಚ್ಚು ಚುರುಕಾಗಿ, ಹೆಚ್ಚು ಕುತೂಹಲ ತುಂಬಿ, ತಿಳಿಯಲು ಬಯಸುತ್ತಿರುತ್ತದೆ. ಆದ್ದರಿಂದಲೇ ಗಣಿತವೋ ಭೂಗೋಳವೋ ಯಾವುದೇ ವಿಷಯವಿರಲಿ ಅಷ್ಟು ಬೇಗ ಕಲಿತುಬಿಡುತ್ತೇವೆ. ನಾವು ದೊಡ್ಡವರಾದಂತೆ ಮನಸ್ಸು ಹರಳುಗಟ್ಟುತ್ತ ಹೋಗುತ್ತದೆ, ಭಾರವಾಗುತ್ತದೆ, ಡಲ್ ಆಗುತ್ತದೆ. ಬಹಳಷ್ಟು ಜನ ವಯಸ್ಸಾದವರು ಹೇಗೆ ಪೂರ್ವಾಗ್ರಹಪೀಡಿತರಾಗಿರುತ್ತಾರೆ ಎಂದು ಗಮನಿಸಿದ್ದೀರಲ್ಲವೇ ? ದೊಡ್ಡವರ ಮನಸ್ಸು ಮುಕ್ತವಾಗಿರುವುದಿಲ್ಲ. ನಿರ್ದಿಷ್ಟವಾದ ದೃಷ್ಟಿಕೋನದಿಂದಲೇ ಎಲ್ಲವನ್ನೂ ನೋಡುತ್ತಿರುತ್ತಾರೆ.

ಮನಸ್ಸನ್ನು ಅರ್ಥಮಾಡಿಕೊಳ್ಳುವುದು, ಕ್ರಮೇಣ ಡಲ್ ಆಗುವ ಬದಲು ಸದಾ ಚುರುಕಾಗಿದ್ದು, ತತ್‌ಕ್ಷಣದ ಹೊಂದಾಣಿಕೆಗಳನ್ನು ತಟ್ಟನೆ ಮಾಡಿಕೊಳ್ಳುತ್ತ, ಅಸಾಮಾನ್ಯ ಉತ್ಸಾಹವನ್ನು ಹೊಂದಿದ್ದು, ಬದುಕಿನ ಎಲ್ಲ ಸಂಗತಿಗಳ ಬಗ್ಗೆ ಅನ್ವೇಷಣೆಯ ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಉಳಿಸಿಕೊಂಡಿರುವುದು ಸಾಧ್ಯವೇ ಎಂಬುದನ್ನು ತಿಳಿಯುವುದು ಮುಖ್ಯವಲ್ಲವೆ ? ಪ್ರೀತಿಯ ದಾರಿಗಳನ್ನು ತಿಳಿಯುವುದಕ್ಕೆ ಮನಸ್ಸು ಸಂಚರಿಸುವ ದಾರಿಗಳನ್ನು ತಿಳಿಯುವುದು ಅಗತ್ಯವಲ್ಲವೇ? ಏಕೆಂದರೆ, ಪ್ರೀತಿಯನ್ನು ನಾಶಮಾಡುವುದು ಮನಸ್ಸೇ ಹೊರತು ಬೇರೆ ಯಾವುದೂ ಅಲ್ಲ. ಕೇವಲ ಜಾಣರಾದವರು, ಉಪಾಯಗಾರರಾದವರು ಎಂದೂ ಪ್ರೀತಿಯನ್ನು ಪಡೆಯಲಾರರು, ಕೊಡಲಾರರು. ಅವರ ಮನಸ್ಸು ಚುರುಕಾದರೂ ಆಳವಿಲ್ಲದ

ನಮ್ಮೊಳಗೇ ಅಂದುಕೊಂಡಿರುತ್ತೇವೆ. ಶ್ರೀಮಂತಿಕೆ ಎನ್ನುವುದು ಬಾಹ್ಯದ್ದು ಮಾತ್ರವಲ್ಲ, ಅಂತರಂಗದ್ದೂ ಹೌದು. ನಿಮ್ಮ ಕೋಟನ್ನು ಬೇರೆಯವರು ತೆಗೆದುಕೊಂಡುಹೋದಾಗ ನಿಮ್ಮ ಅಂತರಂಗದಲ್ಲಿದ್ದ ಆ ಶ್ರೀಮಂತಿಕೆಯ ಭಾವನೆ, ನಿಮ್ಮದಾಗಿದ್ದ ವಸ್ತು ಹೋಯಿತೆಂದು ಕಸಿವಿಸಿ ಪಡುತ್ತೀರಿ.

ನನ್ನದು, ನನಗೆ ಸೇರಿದ್ದು ಎಂಬ ಭಾವನೆ ಪ್ರೀತಿಗೆ ಸಂಬಂಧಿಸಿದಂತೆಯೂ ಅಡಚಣೆ, ಆತಂಕಗಳನ್ನು ಸೃಷ್ಟಿಸುತ್ತದೆಯಲ್ಲವೆ? ನಾನು ನಿಮ್ಮನ್ನು ನನ್ನ ವಶವರ್ತಿಯಾಗಿ ಮಾಡಿಕೊಂಡಿದ್ದರೆ, ನೀವು ನನಗೆ ಸೇರಿದವರು ಎಂಬಂತೆ ನಿಮ್ಮ ಮೇಲೆ ಅಧಿಕಾರ ಹೊಂದಿದ್ದರೆ ಅದು ಪ್ರೀತಿಯೆ? ನಾನು ಕೋಟು, ಕಾರು, ಮನೆ, ಸೀರೆಗಳನ್ನು ಹೊಂದಿರುತ್ತೇನೆ. ಅವುಗಳನ್ನು ಪಡೆದಿರುವುದರಿಂದ ತೃಪ್ತಿಯ ಭಾವವನ್ನು ಅನುಭವಿಸುತ್ತೇನೆ. ಆ ಭಾವದ ಮೇಲೆ ಅವಲಂಬಿತನಾಗಿರುತ್ತೇನೆ. ನನ್ನ ಅಂತರಂಗಕ್ಕೆ ಈ ಭಾವ ತೃಪ್ತಿ ಮುಖ್ಯವಾಗಿರುತ್ತದೆ. ಹೀಗೆ ಯಾರನ್ನಾದರೂ ಹೊಂದುವುದು, ಪಡೆದುಕೊಂಡಿರುವುದು, ಭಾವನಾತ್ಮಕವಾಗಿ ಇನ್ನೊಬ್ಬರ ಮೇಲೆ ಅವಲಂಬಿತನಾಗಿರುವುದು, ಇದನ್ನೇ ನಾವು ಪ್ರೀತಿಯೆಂದು ಕರೆಯುತ್ತೇವೆ. ಆದರೆ, ಪರೀಕ್ಷಿಸಿ ನೋಡಿದರೆ, 'ಪ್ರೀತಿ' ಎಂಬ ಪದದ ಹಿಂದೆ ಮನಸ್ಸು ಮತ್ತೊಬ್ಬ ವ್ಯಕ್ತಿಯನ್ನು ತನ್ನದಾಗಿಸಿಕೊಂಡು, ಹೊಂದಿ, ಪಡೆದು, ಹಾಗೆ ತನ್ನದಾಗಿಸಿಕೊಂಡಿರುವುದರಲ್ಲಿ ತೃಪ್ತಿಯನ್ನು ಪಡೆಯುತ್ತಿರುವುದು ತಿಳಿಯುತ್ತದೆ. ಅನೇಕ ಸೀರೆಗಳು, ಒಳ್ಳೆಯ ಕಾರು, ದೊಡ್ಡ ಮನೆ, ಇವುಗಳನ್ನೆಲ್ಲ ಪಡೆದಿರುವುದರಿಂದ, ಇವೆಲ್ಲ ನಿಮ್ಮವಾಗಿರುವುದರಿಂದ, ಒಳಗೇ ಒಂದು ಥರದ ದೊಡ್ಡ ತೃಪ್ತಿ ಇರುತ್ತದೆ.

ಆಸೆ ಪಡುವ ಮೂಲಕ, ಬಯಸುವ ಮೂಲಕ, ಮನಸ್ಸು ಒಂದು ವಿನ್ಯಾಸವನ್ನು ಸೃಷ್ಟಿಸಿಕೊಳ್ಳುತ್ತದೆ. ಆ ವಿನ್ಯಾಸದಲ್ಲಿಯೇ ಸಿಕ್ಕಿಬೀಳುತ್ತದೆ. ಆಮೇಲೆ ಆಯಾಸಗೊಂಡು, ಸ್ಟುಪಿಡ್ ಆಗಿ, ಡಲ್ ಆಗಿ, ಆಲೋಚನಾರಹಿತವಾಗುತ್ತದೆ. ನಾನು, ನನ್ನದು, ನನಗೆ ಸೇರಿದ್ದು ಎಂಬ ಭಾವದ ಕೇಂದ್ರ ಮನಸ್ಸೇ ಆಗಿದೆ. 'ನಾನು ದೊಡ್ಡವನು,' 'ನಾನು ಸಣ್ಣವನು,' 'ನನಗೆ ಅವಮಾನವಾಯಿತು,' 'ನನಗೆ ಹೆಮ್ಮೆ ಎನಿಸಿತು,' 'ನಾನು ಜಾಣ,' 'ನಾನು ತುಂಬ ಚೆಲುವ,' 'ನಾನು ದೊಡ್ಡ ಮನುಷ್ಯ ಆಗಬೇಕು,' 'ನಾನು ಇಂಥವರ ಮಗ, ಮಗಳು'—ಹೀಗೆಲ್ಲ ಅಂದುಕೊಳ್ಳುವ ಭಾವದ ಕೇಂದ್ರ ಮನಸ್ಸೇ ಆಗಿರುತ್ತದೆ. 'ನಾನು' ಮತ್ತು 'ನನ್ನದು' ಎಂಬ ಭಾವಗಳೇ ಮನಸ್ಸಿನ ತಿರುಳು. ಮನಸ್ಸೆಂದರೆ ಅದೇ. ಮನಸ್ಸು ತಾನು ಏನೋ ಆಗಿದ್ದೇನೆ, ಮಹಾಪುರುಷ, ಜಾಣ, ಮೂರ್ಖ ಇತ್ಯಾದಿಯಾಗಿ ಅಂದುಕೊಂಡಷ್ಟೂ ತನ್ನ ಸುತ್ತ

ಗೋಡೆಗಳನ್ನು ಕಟ್ಟಿಕೊಂಡು ಮುಚ್ಚಿದ ಮನಸ್ಸು, ಡಲ್ ಆದ ಮನಸ್ಸು ಆಗಿಬಿಡುತ್ತದೆ. ಮುಚ್ಚಿಕೊಂಡ ಮನಸ್ಸಿನಲ್ಲಿ ನೋವು ಹುಟ್ಟುವುದು ಅನಿವಾರ್ಯ. ನೋವಿನಿಂದ ನರಳುವ ಮನಸ್ಸು 'ಈಗ ನಾನೇನು ಮಾಡಲಿ ?' ಎಂದು ಕೇಳುತ್ತದೆ. ಎಚ್ಚರ ಮತ್ತು ಸ್ಪಷ್ಟವಾದ ಆಲೋಚನೆಯ ಮೂಲಕ ತನ್ನ ಸುತ್ತಲಿ ಗೋಡೆಗಳನ್ನು ಕೆಡವಿಕೊಳ್ಳುವ ಬದಲು, ತನ್ನ ಸುತ್ತಲೂ ಗೋಡೆಗಳು ಇರುವೆ ಎಂದು ಅರಿಯುವ ಬದಲು, ಅವುಗಳಾಚೆಗೆ ಇರುವ ಮತ್ತೆ ಯಾವುದೋ ಸಂಗತಿಯ ಅವಲಂಬನೆಗೆ, ಮತ್ತೆ ಆ ಅವಲಂಬನೆಗೆ ಸಿಕ್ಕಿಬೀಳುವುದಕ್ಕೆ ಬಯಸುತ್ತದೆ. ಕ್ರಮೇಣ ಮನಸ್ಸೇ ಪ್ರೀತಿಗೆ ಬಲು ದೊಡ್ಡ ಪ್ರತಿಬಂಧಕವಾಗುತ್ತದೆ. ಅಡಚಣೆಯಾಗುತ್ತದೆ. ಮನಸ್ಸನ್ನು ಅರ್ಥಮಾಡಿಕೊಳ್ಳುವುದೆಂದರೆ ನಮ್ಮ ಆಲೋಚನೆಯ ದಾರಿಗಳನ್ನು ತಿಳಿದುಕೊಳ್ಳುವುದು. ಮನಸ್ಸೇ ನಮ್ಮ ಎಲ್ಲ ಕ್ರಿಯೆಗಳ ಬಳಿ ಮೂಲ. ಅದನ್ನು ಅರ್ಥಮಾಡಿಕೊಳ್ಳದಿದ್ದರೆ ಪ್ರೀತಿ ಎಂದರೇನು ಎಂದು ತಿಳಿಯಲು ಸಾಧ್ಯವಿಲ್ಲ.

ಮನಸ್ಸು ಹೋಲಿಕೆಯ ಉಪಕರಣವೂ ಹೌದಲ್ಲವೇ ? ಹೋಲಿಸುವುದು ನಿಮಗೆ ಗೊತ್ತಿದೆ. 'ಇದಕ್ಕಿಂತ ಅದು ಚೆನ್ನಾಗಿದೆ,' ಎನ್ನುತ್ತೀರಿ. ನಿಮಗಿಂತ ಬುದ್ಧಿವಂತ ಅಥವಾ ದಡ್ಡರೊಂದಿಗೆ ಹೋಲಿಸಿಕೊಳ್ಳುತ್ತೀರಿ. 'ನಾನು ಹೋದ ವರ್ಷ ನೋಡಿದ್ದ ನದಿ ನನಗಿನ್ನೂ ನೆನಪಿದೆ. ಅದು 'ಇದಕ್ಕಿಂತ ಚೆನ್ನಾಗಿತ್ತು' ಎನ್ನುವಾಗ ಕೂಡ ಮನಸ್ಸು ಹೋಲಿಕೆಯಲ್ಲಿ ತೊಡಗಿರುತ್ತದೆ. ಪರಮ ಆದರ್ಶವೆಂದು ನೀವು ಭಾವಿಸಿದ ಸಂತ ಅಥವಾ ಹೀರೋನೊಂದಿಗೆ ಹೋಲಿಸಿಕೊಳ್ಳುತ್ತೀರಿ. ಹೋಲಿಕೆಯಿಂದ ಹುಟ್ಟುವ ತೀರ್ಮಾನಗಳು ಮನಸ್ಸನ್ನು ಚುರುಕಾಗುವಂತೆ ಮಾಡುವುದಿಲ್ಲ, ಸರ್ವಗ್ರಾಹಿಯಾಗುವಂತೆ ಮಾಡುವುದಿಲ್ಲ, ಎಲ್ಲವನ್ನೂ ಒಳಗೊಳ್ಳುವಂತೆ ಬೆಳೆಸುವುದಿಲ್ಲ, ಬದಲಾಗಿ ಡಲ್ ಆಗುವಂತೆ ಮಾಡುತ್ತವೆ. ನೀವು ಸತತವಾಗಿ ಹೋಲಿಕೆಯಲ್ಲಿ ತೊಡಗಿರುವಾಗ ಏನಾಗುತ್ತದೆ ? ಸೂರ್ಯಾಸ್ತವನ್ನು ನೋಡುತ್ತಾ ತಕ್ಷಣ ಅದನ್ನು ಇನ್ನೊಂದು ಸೂರ್ಯಾಸ್ತದೊಡನೆ ಹೋಲಿಸುವಾಗ, 'ಈ ಪರ್ವತ ಚೆನ್ನಾಗಿದೆ. ಆದರೆ ಎರಡು ವರ್ಷದ ಹಿಂದೆ ನಾನು ನೋಡಿದ್ದ ಇನ್ನೊಂದು ಪರ್ವತ ಇನ್ನೂ ಚೆನ್ನಾಗಿತ್ತು' ಎನ್ನುವಾಗ ನಿಮ್ಮ ಕಣ್ಣೆದುರಿಗೆ ಇರುವ ಸೌಂದರ್ಯವನ್ನು ನೀವು ನೋಡುತ್ತಲೇ ಇರುವುದಿಲ್ಲ. ಹೋಲಿಕೆಯೆಂಬುದು ಇರುವುದನ್ನು ಪೂರ್ತಿಯಾಗಿ, ಪೂರ್ಣವಾಗಿ ನೋಡುವುದಕ್ಕೆ ಅಡ್ಡಿಯನ್ನುಂಟುಮಾಡುತ್ತದೆ. ನಿಮ್ಮನ್ನು ನೋಡುತ್ತಾ 'ಇವನಿಗಿಂತ ಚೆನ್ನಾಗಿರುವ, ಒಳ್ಳೆಯ ವ್ಯಕ್ತಿಯನ್ನು ನೋಡಿದ್ದೇನೆ' ಎಂದು ಅಂದುಕೊಂಡೆನಾದರೆ ನಾನು ನಿಮ್ಮನ್ನು ನೋಡುತ್ತಲೇ ಇರುವುದಿಲ್ಲ, ಅಲ್ಲವೇ? ನನ್ನ

ಮನಸ್ಸು ಇನ್ನು ಬೇರೆ ಯಾವನೋ ವ್ಯಕ್ತಿಯ ನೆನಪಿನಲ್ಲಿ ಮುಳುಗಿರುತ್ತದೆ. ಸೂರ್ಯಾಸ್ತವನ್ನು ನಿಜವಾಗಿ ನೋಡಬೇಕಾದರೆ ಹೋಲಿಕೆ ಇರಬಾರದು. ನಿಮ್ಮನ್ನು ನಿಜವಾಗಿ ನೋಡಬೇಕಾದರೆ ನಾನು ನಿಮ್ಮನ್ನು ಬೇರೆ ಯಾರೊಂದಿಗೋ ಹೋಲಿಸುತ್ತಿರಬಾರದು. ಹೋಲಿಕೆಯಿಂದ ಹುಟ್ಟುವ ತೀರ್ಮಾನಗಳಿಲ್ಲದೆ ನಿಮ್ಮನ್ನು ಇಡಿಯಾಗಿ ನೋಡಲು ಸಾಧ್ಯವಾದಾಗ ಮಾತ್ರ ನೀವು ನನಗೆ ಅರ್ಥವಾಗುತ್ತೀರಿ. ಇತರರೊಂದಿಗೆ ಹೋಲಿಸುತ್ತಿರುವಾಗ ನಿಮ್ಮನ್ನು ಅರ್ಥಮಾಡಿಕೊಳ್ಳುತ್ತಿರುವುದಿಲ್ಲ, ನಿಮ್ಮ ಬಗ್ಗೆ ತೀರ್ಮಾನ ಮಾಡುತ್ತಿರುತ್ತೇನೆ. ನೀವು ಇಂಥವರು, ಅಂಥವರು ಎಂದು ಹೆಸರಿಟ್ಟುಕೊಳ್ಳುತ್ತಿರುತ್ತೇನೆ. ಆದುದರಿಂದಲೇ ಹೋಲಿಕೆ ಇದ್ದಲ್ಲಿ ಮೂರ್ಖತೆ, ಸ್ಟುಪಿಡಿಟಿ, ಇರುತ್ತದೆ. ನಿಮ್ಮನ್ನು ಬೇರೆ ಯಾರೊಂದಿಗೋ ಹೋಲಿಸುವುದೆಂದರೆ ಮನುಷ್ಯತ್ವದ ಘನತೆಗೆ ಅಪಮಾನ ಮಾಡಿದಂತೆ. ಯಾವುದೇ ಹೋಲಿಕೆ ಇರದೆ ನಿಮ್ಮನ್ನು ನೋಡುವಾಗ ನನ್ನ ಇಡೀ ಕಳಕಳಿ ನಿಮ್ಮನ್ನು ಅರ್ಥಮಾಡಿಕೊಳ್ಳುವುದೇ ಆಗಿರುತ್ತದೆ. ಹೋಲಿಕೆ ಇರದ ಆ ಕಳಕಳಿಯಲ್ಲಿ ವಿವೇಕವಿರುತ್ತದೆ, ಮನುಷ್ಯತ್ವದ ಘನತೆ ಇರುತ್ತದೆ.

ಮನಸ್ಸು ಹೋಲಿಕೆಯಲ್ಲಿ ತೊಡಗಿರುವವರೆಗೆ ಪ್ರೀತಿ ಇರುವುದಿಲ್ಲ. ಆದರೆ, ಮನಸ್ಸು ಯಾವಾಗಲೂ ಹೋಲಿಸುತ್ತಾ, ತೂಕಮಾಡುತ್ತಾ, ತೀರ್ಮಾನಮಾಡುತ್ತಾ ಇರುತ್ತದೆ, ಅಲ್ಲವೇ ? ಸದಾ ದೌರ್ಬಲ್ಯವನ್ನೇ ಹುಡುಕುತ್ತಿರುತ್ತದೆ. ಆದುದರಿಂದಲೇ ಪ್ರೀತಿ ಇರುವುದಿಲ್ಲ. ಅಪ್ಪ ಅಮ್ಮಂದಿರು ತಮ್ಮ ಮಕ್ಕಳನ್ನು ಪ್ರೀತಿಸುವಾಗ ಅವರನ್ನು ಬೇರೆ ಮಕ್ಕಳೊಂದಿಗೆ ಹೋಲಿಸುವುದಿಲ್ಲ. ಆದರೆ ನೀವು ನಿಮಗಿಂತ ಉತ್ತಮರಾದ, ಉದಾತ್ತರಾದ, ಶ್ರೀಮಂತರಾದ ಮತ್ತೊಬ್ಬರೊಂದಿಗೆ ನಿಮ್ಮನ್ನು ಹೋಲಿಸಿಕೊಳ್ಳುತ್ತಿರುತ್ತೀರಿ. ಸದಾ ನಿಮ್ಮನ್ನು ನೀವು ಮತ್ತೊಬ್ಬರ ಹೋಲಿಕೆಯಲ್ಲಿ, ಸಂಬಂಧದಲ್ಲಿ ಅರ್ಥಮಾಡಿಕೊಳ್ಳಲು ಬಯಸುತ್ತಿರುತ್ತೀರಿ. ಹೀಗೆ ಮಾಡುತ್ತಾ ನಿಮ್ಮಲ್ಲಿ ಪ್ರೀತಿಯ ಕೊರತೆಯನ್ನುಂಟುಮಾಡಿಕೊಳ್ಳುತ್ತೀರಿ. ಹೀಗೆ ಮನಸ್ಸು ಹೋಲಿಕೆಯಲ್ಲಿ ತೊಡಗುತ್ತಾ, ಹೆಚ್ಚು ಹೆಚ್ಚು ಹೋಲಿಸಿಕೊಳ್ಳುತ್ತಾ, ಹೆಚ್ಚು ಹೆಚ್ಚು ತನ್ನದನ್ನಾಗಿಮಾಡಿಕೊಳ್ಳಲು ಯತ್ನಿಸುತ್ತಾ, ಹೆಚ್ಚುಹೆಚ್ಚು ಅವಲಂಬಿತವಾಗುತ್ತಾ, ಒಂದು ವಿನ್ಯಾಸವನ್ನು ರೂಪಿಸಿಕೊಂಡು ಅದರಲ್ಲೇ ಸಿಕ್ಕಿಬೀಳುತ್ತದೆ. ಯಾವುದನ್ನೂ ಏನನ್ನೂ ಹೊಸದಾಗಿ, ಫ್ರೆಶ್ ಆಗಿ ನೋಡಲಾರದೆ ಬದುಕಿನ ಸುಗಂಧವಾದ ಪ್ರೀತಿಯನ್ನೇ ನಾಶಮಾಡಿಬಿಡುತ್ತದೆ.

ಪ್ರಶ್ನೆ: ನಾವು ದೇವರ ಬಳಿ ಏನನ್ನು ಬೇಡಬೇಕು?

ಕೃಷ್ಣಮೂರ್ತಿ : ನಿನಗೆ ದೇವರ ಬಗ್ಗೆ ತುಂಬ ಆಸಕ್ತಿ ಇದೆಯಲ್ಲವೇ ? ಏಕೆ ಈ ಆಸಕ್ತಿ? ನಿನ್ನ ಮನಸ್ಸು ಏನನ್ನೋ ಬಯಸುತ್ತದೆ, ಹಂಬಲಿಸುತ್ತದೆ. ಆದ್ದರಿಂದಲೇ ಚಡಪಡಿಸುತ್ತಿರುತ್ತದೆ. ನಿನ್ನಿಂದ ಏನನ್ನೋ ಬಯಸುತ್ತಿದ್ದರೆ ನನ್ನ ಮನಸ್ಸು ಕೂಡ ಚಡಪಡಿಸುತ್ತಿರುತ್ತದೆ, ಅಲ್ಲವೇ ?

ದೇವರ ಬಳಿ ಏನನ್ನು ಬೇಡಬೇಕೆಂದು ಈ ಹುಡುಗ ಕೇಳುತ್ತಿದ್ದಾನೆ. ಈತನಿಗೆ ದೇವರೆಂದರೆ ಏನು, ತಿಳಿದಿಲ್ಲ; ತನಗೆ ಏನು ಬೇಕು, ಗೊತ್ತಿಲ್ಲ. ಆದರೆ 'ನಾನು ಬೇಡಬೇಕು, ಪ್ರಾರ್ಥಿಸಬೇಕು, ನನ್ನನ್ನು ಕಾಪಾಡಬೇಕು' ಎಂಬ ಸಾಮಾನ್ಯ ತಿಳುವಳಿಕೆಯ ಭಾವವಿದೆ. ಮನಸ್ಸಿನ ಒಂದೊಂದು ಮೂಲೆಯೂ ಏನನ್ನೋ ಬಯಸುತ್ತಿರುತ್ತದೆ, ಹಂಬಲಿಸುತ್ತಿರುತ್ತದೆ. ಸದಾ ಬಯಸುತ್ತಾ, ಹಿಡಿದುಕೊಳ್ಳುತ್ತಾ, ಹಿಂದೆ ಮುಂದೆ ತಳ್ಳುತ್ತಾ, ನೋಡುತ್ತಾ, ಹೋಲಿಸುತ್ತಾ, ತೀರ್ಮಾನಿಸುತ್ತಾ ಇರುತ್ತದೆ. ಆದ್ದರಿಂದಲೇ ಮನಸ್ಸು ಸುಮ್ಮನೆ, ನಿಶ್ಚಲವಾಗಿರುವುದೇ ಇಲ್ಲ. ನಿಮ್ಮ ಮನಸ್ಸನ್ನೇ ನೋಡಿಕೊಳ್ಳಿ. ನಿಮ್ಮ ಮನಸ್ಸು ಮಾಡುವ ಕೆಲಸಗಳನ್ನು ನೋಡಿಕೊಳ್ಳಿ. ಅದು ಹೇಗೆ ಕಂಟ್ರೋಲ್ ಮಾಡಲು, ಯಜಮಾನಿಕೆ ನಡೆಸಲು, ದಮನಿಸಲು, ಒಂದಲ್ಲ ಒಂದು ಬಗೆಯ ತೃಪ್ತಿಯನ್ನು ಪಡೆಯಲು ಯತ್ನಿಸುತ್ತಿರುತ್ತದೆ; ಸದಾ ಕೇಳುತ್ತಾ, ಯಾಚಿಸುತ್ತಾ, ಹೋರಾಡುತ್ತಾ, ಹೋಲಿಸುತ್ತಾ ಇರುತ್ತದೆ ಎಂಬುದನ್ನು ನೋಡಿಕೊಳ್ಳಿ. ಇಂಥ ಮನಸ್ಸನ್ನು ಚುರುಕಾದ ಮನಸ್ಸು ಎಂದು ಹೇಳುತ್ತೇವೆ. ಇದು ಚುರುಕಾದ ಮನಸ್ಸೇ? ಚಿಟ್ಟೆಯಂತೆ ಸದಾ ಇಲ್ಲಿಂದಲ್ಲಿಗೆ ಹಾರಾಡುತ್ತಿರುವ ಮನಸ್ಸು ಚುರುಕಾದ ಮನಸ್ಸಲ್ಲ. ನಿಶ್ಚಲವಾದ ಮನಸ್ಸೇ ಚುರುಕಾದ ಮನಸ್ಸು. ನಿಶ್ಚಲವಾದ ಮನಸ್ಸು ಮಾತ್ರವೇ ದೇವರನ್ನು ತಿಳಿಯಬಹುದು. ನಿಶ್ಚಲವಾದ ಮನಸ್ಸು ದೇವರ ಬಳಿ ಏನನ್ನೂ ಬೇಡುವುದಿಲ್ಲ. ಮನಸ್ಸು ತನಗೆ ಎಂದೂ ದೊರೆಯುದದನ್ನೇ ಬಯಸುತ್ತಿರುತ್ತದೆ. ಮನಸ್ಸಿಗೆ ನಿಜವಾಗಿ ಬೇಕಾಗಿರುವುದು ಸುರಕ್ಷೆ, ಸುಭದ್ರತೆ, ಸುಖ, ಖಚಿತತೆ. ದೇವರನ್ನು ಏನಾದರೂ ಕೇಳಿದರೆ ದೇವರು ಸಿಗುವುದೇ ಇಲ್ಲ.

ಪ್ರಶ್ನೆ: ಗ್ರೇಟ್‌ನೆಸ್ ಎಂದರೆ ಏನು ? ನಾನು ಹೇಗೆ ಗ್ರೇಟ್ ಆಗಬಹುದು ?

ಕೃಷ್ಣಮೂರ್ತಿ : ನಾವು ಗ್ರೇಟ್ ಆಗಲು ಬಯಸುವುದೇ ದುರದೃಷ್ಟದ ಸಂಗತಿ. ನಮಗೆಲ್ಲರಿಗೂ ಗ್ರೇಟ್ ಆಗುವ ಆಸೆ. ನಾವು ಗಾಂಧಿಯಾಗಬೇಕು, ಪ್ರಧಾನಿಯಾಗಬೇಕು ಎಂದು, ಮಹಾನ್ ಸಂಶೋಧಕರು, ಲೇಖಕರು ಆಗಬೇಕೆಂದು

ಬಯಸುತ್ತೇವೆ. ಯಾಕೆ? ಶಿಕ್ಷಣದಲ್ಲಿ, ಧರ್ಮದಲ್ಲಿ, ಬದುಕಿನ ಪ್ರತಿಯೊಂದು ವಲಯದಲ್ಲೂ ನಮಗೆ ಉದಾಹರಣೆಗಳು ಎದುರಾಗುತ್ತವೆ. ಮಹಾ ಕವಿ, ಮಹಾ ವಾಗ್ಮಿ, ಮಹಾ ಮುತ್ಸದ್ದಿ, ಮಹಾ ಸಂತ, ಮಹಾ ನಾಯಕ ಇಂಥ ನಿದರ್ಶನಗಳನ್ನಿಟ್ಟುಕೊಂಡು ನಾವು ಅವರಂತಾಗಲು ಬಯಸುತ್ತೇವೆ.

ನೀವು ಮತ್ತೊಬ್ಬರಂತಾಗಲು ಬಯಸಿದಾಗ ವರ್ತನೆಯ ಒಂದು ವಿನ್ಯಾಸವನ್ನು ರೂಪಿಸಿಕೊಂಡಿರುತ್ತೀರಿ, ಅಲ್ಲವೇ? ನಿಮ್ಮ ಆಲೋಚನೆಗೆ ಒಂದು ಮಿತಿಯನ್ನು ನಿರ್ಮಿಸಿಕೊಂಡು ಅದನ್ನು ನಿರ್ದಿಷ್ಟ ಗಡಿಯೊಳಗೆ ಬಂಧಿಸಿರುತ್ತೀರಿ. ನಿಮ್ಮ ಆಲೋಚನೆ ಹರಳುಗಟ್ಟಿ, ಕಿರಿದಾಗಿ, ಪರಿಮಿತವಾಗಿ, ಉಸಿರುಗಟ್ಟಿಬಿಟ್ಟಿರುತ್ತದೆ. ಗ್ರೇಟ್ ಆಗಬೇಕೆಂದು ಬಯಸುವುದು ಏಕೆ? ನೀವು ಏನಾಗಿದ್ದೀರೋ ಅದನ್ನು ನೋಡಿ ಅರ್ಥಮಾಡಿಕೊಳ್ಳುವುದಿಲ್ಲ ಏಕೆ? ನೀವು ಮತ್ತೊಬ್ಬರಂತಾಗಬೇಕೆಂದು ಬಯಸಿದ ಕ್ಷಣವೇ ಕಾರ್ಪಣ್ಯ, ಸಂಘರ್ಷ, ಅಸೂಯೆ, ದುಃಖಗಳೆಲ್ಲ ಹುಟ್ಟಿಕೊಳ್ಳುತ್ತವೆ. ನೀವು ಬುದ್ಧನಂತಾಗಬೇಕೆಂದು ಬಯಸಿದರೆ ಏನಾಗುತ್ತದೆ? ಬುದ್ಧನ ಆದರ್ಶವನ್ನು ಸಾಧಿಸಲು ಸತತವಾಗಿ ಪ್ರಯತ್ನಿಸತೊಡಗುತ್ತೀರಿ. ನೀವು ಸ್ಟುಪಿಡ್ ಆಗಿದ್ದು ಚತುರರಾಗಲು ಬಯಸಿದರೆ ನೀವೇನಾಗಿದ್ದೀರೋ ಅದನ್ನು ಬಿಟ್ಟು ಅದರಾಚೆ ಮತ್ತೊಂದು ಆಗಲು ಬಯಸುತ್ತೀರಿ. ನೀವು ಕುರೂಪಿಯಾಗಿದ್ದು ಸುಂದರರಾಗಲು ಬಯಸಿದರೆ ಸಾಯುವವರೆಗೂ ಪ್ರಯತ್ನಿಸುತ್ತಲೇ ಇರುತ್ತೀರಿ. ಅಥವಾ ನೀವು ಸುಂದರರೆಂದು ನಿಮಗೇ ಮೋಸಮಾಡಿಕೊಳ್ಳುತ್ತೀರಿ. ನೀವು ನಿಜವಾಗಿ ಏನಾಗಿದ್ದೀರೋ ಅದನ್ನು ಬಿಟ್ಟು ಬೇರೆ ಏನೋ ಆಗಲು ಬಯಸಿದಾಗ ನಿಮ್ಮ ಮನಸ್ಸು ಸವೆದುಹೋಗುತ್ತದೆ. 'ನಾನು ಹೀಗಿದ್ದೇನೆ. ಇದು ವಾಸ್ತವ. ಇದನ್ನು ಪರಿಶೀಲಿಸಿ ಅರ್ಥಮಾಡಿಕೊಳ್ಳುತ್ತೇನೆ' ಎಂದರೆ ನೀವು ಮೀರಿ ಬೆಳೆಯಲು ಸಾಧ್ಯವಾಗುತ್ತದೆ. ನೀವು ಏನಾಗಿದ್ದೀರೋ ಅದನ್ನು ಅರ್ಥಮಾಡಿಕೊಂಡಾಗ ಮಹಾ ಶಾಂತಿ ಸಮಾಧಾನಗಳು ಇರುತ್ತವೆ, ಮಹಾ ಒಳನೋಟಗಳು ಇರುತ್ತವೆ, ಮಹಾ ಪ್ರೀತಿ ಇರುತ್ತದೆ.

ಪ್ರಶ್ನೆ: ಪ್ರೀತಿಯು ಆಕರ್ಷಣೆಯನ್ನು ಆಧರಿಸಿದ್ದಲ್ಲವೇ?

ಕೃಷ್ಣಮೂರ್ತಿ : ಸುಂದರಿಯಾದ ಹೆಣ್ಣಿನ ಬಗ್ಗೆ, ಚೆಲುವನಾದ ಗಂಡಿನ ಬಗ್ಗೆ ಆಕರ್ಷಿತರಾದರೆ ಏನು ತಪ್ಪು? ಅದನ್ನು ನೋಡೋಣ. ಗಂಡು, ಹೆಣ್ಣು, ಮಗು, ಯಾರ ಬಗ್ಗೆಯಾದರೂ ಆಕರ್ಷಿತರಾದರೆ ಏನಾಗುತ್ತದೆ? ನಿಮಗೆ ಸದಾ ಅವರೊಡನೆ ಇರಬೇಕೆನಿಸುತ್ತದೆ, ಅಷ್ಟೇ ಅಲ್ಲ, ಅವರು ನಿಮ್ಮವರೇ, ನಿಮ್ಮವರು ಮಾತ್ರವೇ,

ಆಗಬೇಕೆಂಬ ಅಪೇಕ್ಷೆ ಹುಟ್ಟುತ್ತದೆ. ನಿಮ್ಮ ಮೈ ಅವರ ಮೈಯೊಡನೆ ಇರಬೇಕೆಂದು ಬಯಸುತ್ತದೆ. ಅಂದರೆ ನೀವೇನು ಮಾಡಿದಂತಾಯಿತು? ನಿಮ್ಮಲ್ಲಿ ಮತ್ತೊಬ್ಬರ ಬಗ್ಗೆ ಆಕರ್ಷಣೆ ಹುಟ್ಟಿದಾಗ ಅವರು ನಿಮ್ಮವರಾಗಬೇಕು, ನೀವು ಅವರನ್ನು ಪಡೆಯಬೇಕು ಎಂಬ ಹಂಬಲ ಹುಟ್ಟುತ್ತದೆ. ಆ ವ್ಯಕ್ತಿ ನಿಮ್ಮನ್ನು ಬಿಟ್ಟು ಬೇರೆ ಯಾರನ್ನೂ ನೋಡಬಾರದು, ಬಯಸಬಾರದು ಎನ್ನುತ್ತೀರಿ. ಮತ್ತೊಬ್ಬ ಮನುಷ್ಯ ಜೀವಿಯನ್ನು ಹೀಗೆ ನಿಮ್ಮ ಅಧೀನದಲ್ಲಿಟ್ಟುಕೊಳ್ಳುವುದು ಪ್ರೀತಿಯೇ? ಖಂಡಿತ ಅಲ್ಲ. ಮತ್ತೊಬ್ಬ ಮನುಷ್ಯ ಜೀವಿಯ ಸುತ್ತಲೂ 'ಇದು ನನ್ನದು' ಎಂಬ ಗೋಡೆ ಕಟ್ಟಿದಾಗ ಪ್ರೀತಿ ಇರುವುದಿಲ್ಲ.

ಆದರೆ, ವಾಸ್ತವವೆಂದರೆ ನಮ್ಮ ಮನಸ್ಸುಗಳು ಸದಾ ಹೀಗೆ ಮಾಡುತ್ತಲೇ ಇರುತ್ತವೆ. ಆದ್ದರಿಂದಲೇ ನಾವು ಈ ಸಂಗತಿಗಳನ್ನು ಕುರಿತು ಚರ್ಚಿಸುತ್ತಿದ್ದೇವೆ. ನಮ್ಮ ಮನಸ್ಸು ಯಾವ ದಾರಿಗಳಲ್ಲಿ ಯೋಚನೆ ಮಾಡುತ್ತದೆ ಎಂದು ತಿಳಿದಾಗ, ಆ ಬಗ್ಗೆ ಎಚ್ಚರ ಮೂಡಿದಾಗ, ಮನಸ್ಸು ತನ್ನಷ್ಟಕ್ಕೆ ತಾನೇ ಶಾಂತವಾಗುತ್ತದೆ, ಸುಮ್ಮನಾಗುತ್ತದೆ.

ಪ್ರಶ್ನೆ: ಪ್ರಾರ್ಥನೆ ಎಂದರೇನು? ದಿನನಿತ್ಯದ ಬದುಕಿನಲ್ಲಿ ಪ್ರಾರ್ಥನೆಯ ಮಹತ್ವವೇನು?

ಕೃಷ್ಣಮೂರ್ತಿ : ಪ್ರಾರ್ಥಿಸುವುದೇಕೆ? ಪ್ರಾರ್ಥನೆ ಎಂದರೇನು? ಬಹಳಷ್ಟು ಪ್ರಾರ್ಥನೆಗಳು ಕೇವಲ ಯಾಚನೆಗಳು, ಬೇಡಿಕೆಗಳು ಆಗಿರುತ್ತವೆ. ನೀವು ಕಷ್ಟದಲ್ಲಿ ನರಳುತ್ತಿರುವಾಗ ಇಂಥ ಪ್ರಾರ್ಥನೆಗಳನ್ನು ಮಾಡುತ್ತೀರಿ. ನೀವು ಒಬ್ಬಂಟಿ ಎನಿಸಿದಾಗ, ದುಃಖಿಗಳಾಗಿದ್ದಾಗ, ಸಹಾಯ ಮಾಡುವಂತೆ ದೇವರನ್ನು ಕೋರುತ್ತೀರಿ. ಪ್ರಾರ್ಥನೆಯ ರೂಪಗಳು ಬೇರೆಯಾಗಬಹುದು, ಆದರೆ ಪ್ರಾರ್ಥನೆಗಳ ಹಿಂದಿರುವ ಉದ್ದೇಶ ಒಂದೇ ಆಗಿರುತ್ತದೆ. ಬಹಳಷ್ಟು ಜನರ ಮಟ್ಟಿಗೆ ಪ್ರಾರ್ಥನೆಯೆಂದರೆ ಯಾಚನೆ, ಕೋರಿಕೆ, ಬೇಡಿಕೆ. ನೀನು ಹಾಗೆ ಮಾಡುತ್ತಿದ್ದೀಯಾ? ನೀನು ಪ್ರಾರ್ಥಿಸುವುದೇಕೆ? ಪ್ರಾರ್ಥಿಸಬೇಕು ಅಥವಾ ಪ್ರಾರ್ಥಿಸಬಾರದು ಎಂದು ಹೇಳುತ್ತಿಲ್ಲ. ನೀನು ಪ್ರಾರ್ಥಿಸುವುದೇಕೆ? ಹೆಚ್ಚು ಜ್ಞಾನ ಸಿಗಲಿ ಎಂದೇ? ಹೆಚ್ಚು ಶಾಂತಿ ಇರಲಿ ಎಂದೇ? ಜಗತ್ತು ದುಃಖದಿಂದ ಬಿಡುಗಡೆ ಹೊಂದಲಿ ಎಂದೇ? ಬೇರೆ ಇನ್ನಾವುದಾದರೂ ರೀತಿಯ ಪ್ರಾರ್ಥನೆ ಇದೆಯೇ? ಪ್ರಾರ್ಥನೆಯೇ ಅಲ್ಲದ ಪ್ರಾರ್ಥನೆಯೂ ಇದೆ—ಸದಾಶಯಗಳನ್ನು ಬೀರುವ, ಪ್ರೀತಿ ಮತ್ತು ಐಡಿಯಾಗಳನ್ನು ಸಾರುವ ಪ್ರಾರ್ಥನೆ. ನೀನು ಮಾಡುತ್ತಿರುವ ಪ್ರಾರ್ಥನೆ ಎಂಥದ್ದು?

ದೇವರನ್ನೋ ಸಂತನನ್ನೋ ಕುರಿತು ಪ್ರಾರ್ಥಿಸುವಾಗ ನೀನೊಂದು ಖಾಲಿಯಾದ ಪಾತ್ರೆ, ಅದನ್ನು ತುಂಬು ಎಂದು ಬೇಡುತ್ತಿರುತ್ತೀಯೆ, ಅಲ್ಲವೇ ? ಏನು ಆಗುತ್ತದೋ ಅದರಿಂದ ತೃಪ್ತಿ ಇಲ್ಲ, ನಿನಗೆ ಏನು ಸಿಗುತ್ತದೋ ಅದರಿಂದ ತೃಪ್ತಿ ಇಲ್ಲ, ನಿನ್ನ ಪಾತ್ರೆ ನೀನು ಬಯಸುವಂತೆಯೇ ತುಂಬಿಕೊಳ್ಳಬೇಕು ಎಂದು ಬಯಸುವೆ. ಅಂದರೆ, ನಿನ್ನ ಪ್ರಾರ್ಥನೆ ಕೇವಲ ಯಾಚನೆ, ನೀನು ಸಂತೃಪ್ತನಾಗಬೇಕೆಂಬ ಹಕ್ಕೊತ್ತಾಯ. ಆದ್ದರಿಂದ ಅದು ಪ್ರಾರ್ಥನೆಯೇ ಅಲ್ಲ. 'ನಾನು ನರಳುತ್ತಿದ್ದೇನೆ. ದೇವರೇ, ನನ್ನನ್ನು ತೃಪ್ತಿಗೊಳಿಸು; ನನ್ನ ಅಣ್ಣ, ತಮ್ಮ, ನನಗೆ ಸಿಗುವಂತೆ ಮಾಡು; ನನ್ನನ್ನು ಶ್ರೀಮಂತನನ್ನಾಗಿಸು' ಎಂದೆಲ್ಲ ಬೇಡುತ್ತೀಯೆ. ನಿನ್ನ ಬೇಡಿಕೆಗಳು ಸತತವಾಗಿ ಬೆಳೆಯುತ್ತಲೇ ಹೋಗುತ್ತವೆ. ಇದು ಖಂಡಿತವಾಗಿ ಪ್ರಾರ್ಥನೆಯಲ್ಲ.

ನಿನ್ನನ್ನು ನೀನು ಅರ್ಥಮಾಡಿಕೊಳ್ಳುವುದು ಮುಖ್ಯ. ನೀನು ಸತತವಾಗಿ ಒಂದಲ್ಲ ಒಂದು ಬೇಡಿಕೆಗಳನ್ನು ಯಾಕೆ ಕೋರುತ್ತಿದ್ದೀಯೆ, ಕೋರುವ, ಬೇಡುವ, ಯಾಚಿಸುವ ಒತ್ತಾಯ ಏಕೆ ಹುಟ್ಟುತ್ತದೆ ಎಂಬುದನ್ನು ತಿಳಿಯುವುದು ಮುಖ್ಯ. ನೀನು ಏನನ್ನು ಯೋಚಿಸುತ್ತಿದ್ದೀಯೆ ಎಂಬುದನ್ನು ಎಚ್ಚರದಿಂದ ಅರ್ಥಮಾಡಿಕೊಂಡಷ್ಟೂ, ಏನನ್ನು ಭಾವಿಸುತ್ತಿದ್ದೀಯೆ ಎಂಬುದನ್ನು ತಿಳಿದಷ್ಟೂ, 'ಏನು ಇದೆಯೋ' ಆ ಸತ್ಯವನ್ನು ಅರಿತಷ್ಟೂ ಆ ಸತ್ಯವು ನೀನು ಸ್ವತಂತ್ರನಾಗಲು ಸಹಾಯ ಮಾಡುತ್ತದೆ.

ಕೇಳಿಸಿಕೊಳ್ಳುವುದು

ಕೇಳಿಸಿಕೊಳ್ಳುವುದು ಹೇಗೆ ಎಂದು ತಿಳಿಯುವುದು ಬಹಳ ಮುಖ್ಯವೆಂದು ಭಾವಿಸಿದ್ದೇನೆ. ಕೇಳಿಸಿಕೊಳ್ಳುವುದು ಹೇಗೆಂದು ಗೊತ್ತಿದ್ದರೆ ಯಾವುದೇ ವಿಷಯವನ್ನು ಬುಡಮಟ್ಟದವರೆಗೂ ತಕ್ಷಣವೇ ತಿಳಿಯಬಹುದು. ಶುದ್ಧವಾದ ನಾದವನ್ನು ಕೇಳಿಸಿಕೊಳ್ಳುವುದಕ್ಕೆ ಸಾಧ್ಯವಾದರೆ ತಟ್ಟನೆ ಅದರ ಸೌಂದರ್ಯವನ್ನು ಅನುಭವಿಸಬಹುದು. ಅಂತೆಯೇ ಹೇಳುತ್ತಿರುವ ಮಾತನ್ನು ಕೇಳಿಸಿಕೊಳ್ಳುವುದು ಹೇಗೆಂದು ತಿಳಿದಿದ್ದರೆ ತಕ್ಷಣ ಅರ್ಥಮಾಡಿಕೊಳ್ಳಬಹುದು. ಕೇಳಿಸಿಕೊಳ್ಳುವುದೆಂದರೆ ನಿಮ್ಮ ಸಂಪೂರ್ಣ ಗಮನವನ್ನು ಫೋಕಸ್ ಮಾಡುವುದು. ಗಮನವೆನ್ನುವುದು ಆಯಾಸದ ಕೆಲಸವೆಂದು ನೀವು ಭಾವಿಸಿದ್ದೀರಿ. ಗಮನವನ್ನು ಕೇಂದ್ರೀಕರಿಸುವುದು ಸುದೀರ್ಘವಾದ ಪ್ರಕ್ರಿಯೆ. ಆದರೆ ನಿಜವಾಗಿ ಕೇಳಿಸಿಕೊಳ್ಳುವುದು ಹೇಗೆಂದು ನಿಮಗೆ ಗೊತಿದ್ದರೆ ಗಮನವು ಕಷ್ಟವಲ್ಲವೇ ಅಲ್ಲ, ಅಸಾಮಾನ್ಯವಾದ ಎಚ್ಚರದೊಂದಿಗೆ ವಿಷಯದ ತಿರುಳನ್ನು ತಕ್ಷಣವೇ ತಿಳಿಯಬಹುದು ಎಂದು ಅರಿಯುತ್ತೀರಿ.

ನಾವು ಸಾಮಾನ್ಯವಾಗಿ ಕೇಳಿಸಿಕೊಳ್ಳುವುದೇ ಇಲ್ಲ. ಹೊರಗಿನ ಸದ್ದುಗಳೋ, ಮನಸ್ಸಿನೊಳಗಿನ ಪೂರ್ವಾಗ್ರಹಗಳೋ ನಮ್ಮ ಗಮನವನ್ನು ಸೆಳೆದು, ಮನಸ್ಸನ್ನು ತಿರುಚಿ, ನಿಜವಾಗಿ ಕೇಳಿಸಿಕೊಳ್ಳುವುದೇ ಅಸಾಧ್ಯವಾಗಿಬಿಡುತ್ತದೆ. ದೊಡ್ಡವರಿಗಂತೂ ಕೇಳಿಸಿಕೊಳ್ಳುವುದು ಬಹಳ ಕಷ್ಟ. ಅವರ ಮನಸ್ಸಿನಲ್ಲಿ ಹಿಂದಿನ ಸಾಧನೆಗಳ, ಅಥವ ಸೋಲುಗಳ ಸರಣಿಯೇ ತುಂಬಿಕೊಂಡಿರುತ್ತದೆ. ಅವರು ಜಗತ್ತಿನಲ್ಲಿ ಏನನ್ನೋ ಸಾಧಿಸಿದವರಾಗಿರುತ್ತಾರೆ, ಅಥವ ಏನೂ ಸಾಧಿಸದೆ ತಾವು ಕ್ಷುದ್ರರು ಎಂದುಕೊಂಡಿರುತ್ತಾರೆ. ಅವರ ಮನಸ್ಸಿನ ಈ ಗಟ್ಟಿ ಪದರಗಳನ್ನು ಸೀಳಿಕೊಂಡು, ಪೂರ್ವಾಗ್ರಹಗಳನ್ನು ದಾಟಿಕೊಂಡು, ಅವರು ಕೇಳಿಸಿಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಹೇಳುತ್ತಿರುವ ಮಾತನ್ನು ಕೇಳಿಸಿಕೊಳ್ಳುವುದು ಹೇಗೆಂದು ಕಲಿತರೆ, ಯಾವುದೇ ವ್ಯಾಖ್ಯಾನ ವಿಮರ್ಶೆಗಳಿಲ್ಲದೆ, ಯಾವುದೇ ಅಡೆತಡೆಗಳಿಲ್ಲದೆ, ಬೆಳಗಿನ ಹೊತ್ತು ಹಕ್ಕಿಯ ಹಾಡನ್ನು

ಕೇಳಿಸಿಕೊಳ್ಳುವಂತೆ ಕೇಳಿಸಿಕೊಳ್ಳಲು ಕಲಿತರೆ ಆಗ ಕೇಳಿಸಿಕೊಳ್ಳುವುದು, ಅದರಲ್ಲೂ ಸತ್ಯವಾದದ್ದನ್ನು ಹೇಳುತ್ತಿರುವಾಗ ಕೇಳಿಸಿಕೊಳ್ಳುವುದು, ಅಸಾಮಾನ್ಯವಾದ ಸಂಗತಿಯಾಗುತ್ತದೆ. ನಾವು ಕೇಳಿಸಿಕೊಳ್ಳುವ ಸಂಗತಿ ನಮಗೆ ಇಷ್ಟವಾಗದೆ ಇರಬಹುದು, ನಾವು ತಕ್ಷಣವೇ ಅದಕ್ಕೆ ಪ್ರತಿರೋಧವನ್ನೂ ತೋರಬಹುದು, ಆದರೆ, ನಿಜವಾಗಿ ಕೇಳಿಸಿಕೊಂಡಾಗ ಮಾತಿನಲ್ಲಿರುವ ಸತ್ಯ ಗೊತ್ತಾಗುತ್ತದೆ. ನಿಜವಾದ ಕೇಳಿಸಿಕೊಳ್ಳುವಿಕೆಯಿಂದ ಮನಸ್ಸು ಭಾರವನ್ನು ಕಳೆದುಕೊಂಡು ಹಗುರಾಗುತ್ತದೆ, ಅನೇಕ ವರ್ಷಗಳ ಭಯವನ್ನು, ಅಪಾಯವನ್ನು, ಹಂಬಲಗಳ ಕಳೆಯನ್ನು ತೊಳೆದುಬಿಡುತ್ತದೆ.

ಪ್ರಚಾರವೆಂದರೆ ಏನೆಂದು ನಿಮಗೆ ಗೊತ್ತಲ್ಲವೆ? ಯಾವುದೇ ಒಂದು ವಿಚಾರವನ್ನು ತಲೆಯಲ್ಲಿ ತುಂಬುವುದು, ಒಂದು ಐಡಿಯಾವನ್ನು ಮತ್ತೆ ಮತ್ತೆ ಹೇಳುತ್ತ ಮನಸ್ಸಿನಲ್ಲಿ ಅದು ತುಂಬಿಕೊಳ್ಳುವಂತೆ ಮಾಡುವುದು ಪ್ರಚಾರ. ಪ್ರಚಾರಕರು, ರಾಜಕಾರಣಿಗಳು, ಧರ್ಮಗುರುಗಳು ನೀವು ಏನನ್ನು ನಂಬಬೇಕೆಂದು ಅವರು ಬಯಸುತ್ತಾರೋ ಅದನ್ನು ನಿಮ್ಮ ಮನಸ್ಸಿನಲ್ಲಿ ಅಚ್ಚೊತ್ತುವುದು ಹೀಗೆಯೇ. ಈ ಕಾರ್ಯದಲ್ಲೂ ಕೇಳಿಸಿಕೊಳ್ಳುವುದು ಇದೆ. ಇಂಥ ಜನಗಳು ನೀವು ಏನು ಮಾಡಬೇಕು, ಯಾವ ಪುಸ್ತಕಗಳನ್ನು ಓದಬೇಕು, ಯಾರನ್ನು ಹಿಂಬಾಲಿಸಬೇಕು, ಯಾವ ಐಡಿಯಾ ಸರಿ, ಯಾವ ಐಡಿಯಾ ತಪ್ಪು ಎಂದೆಲ್ಲ ಸತತವಾಗಿ ಹೇಳುತ್ತಲೇ ಇರುತ್ತಾರೆ. ಅವರ ಮಾತು, ಸತತವಾದ ಪುನರುಕ್ತಿ, ನಿಮ್ಮ ಮನಸ್ಸಿನಲ್ಲಿ ಗುರುತನ್ನು ಉಳಿಸುತ್ತದೆ. ನೀವು ಪ್ರಜ್ಞಾಪೂರ್ವಕವಾಗಿ ಕೇಳಿಸಿಕೊಳ್ಳದಿದ್ದರೂ ಆ ಮಾತುಗಳು ನಿಮ್ಮ ಮನಸ್ಸಿನ ಮೇಲೆ ಗುರುತು ಉಳಿಸುತ್ತವೆ. ಪ್ರಚಾರದ ಉದ್ದೇಶವೂ ಅದೇ. ಆದರೆ ನೋಡಿ, ಪ್ರಚಾರವು ನಿರ್ದಿಷ್ಟ ಹಿತಾಸಕ್ತಿಗಳಿಂದ ಪ್ರೇರಿತವಾಗಿರುತ್ತದೆ. ನೀವು ನಿಜವಾಗಿ ಕೇಳಿಸಿಕೊಳ್ಳುತ್ತಿರುವಾಗ, ಪ್ರಯತ್ನವಿಲ್ಲದೆ ಕೇಳಿಸಿಕೊಳ್ಳುತ್ತಿರುವಾಗ, ತತ್‌ಕ್ಷಣದಲ್ಲಿಯೇ ಸತ್ಯವು ನಿಮಗೆ ಅರ್ಥವಾಗುವಂತೆ ಪ್ರಚಾರದಿಂದ ಸತ್ಯವು ಅರ್ಥವಾಗುವುದಿಲ್ಲ.

ನೀವೀಗ ನನ್ನ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದೀರಿ. ಮಾತುಗಳಿಗೆ ಗಮನನೀಡಲು ಪ್ರಯತ್ನವನ್ನೇನೂ ಮಾಡುತ್ತಿಲ್ಲ. ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದೀರಿ. ನೀವು ಕೇಳಿಸಿಕೊಳ್ಳುತ್ತಿರುವುದರಲ್ಲಿ ಸತ್ಯವೇನಾದರೂ ಇದ್ದರೆ, ನಿಮ್ಮೊಳಗೇ ದೊಡ್ಡ ಬದಲಾವಣೆಯೊಂದು ಆಗುತ್ತಿರುವುದನ್ನು ಗಮನಿಸುತ್ತೀರಿ. ಅದು ಪೂರ್ವ ನಿಶ್ಚಿತವಲ್ಲದ, ಆಗಬೇಕೆಂದು ಬಯಸಿರದ, ನಿಮ್ಮ ಮನಸ್ಸಿನ ಸೃಷ್ಟಿಯಲ್ಲದ ಕೇವಲ ಸತ್ಯದ ಒಡೆತನ ಮಾತ್ರವೇ ಇರುವಂಥ ಸಂಪೂರ್ಣವಾದ ಬದಲಾವಣೆ. ನೀವು

ಎಲ್ಲವನ್ನೂ ಇದೇ ರೀತಿಯಲ್ಲಿ ಕೇಳಿಸಿಕೊಳ್ಳಬೇಕೆಂದು ಸೂಚಿಸಲು ಇಷ್ಟಪಡುತ್ತೇನೆ. ನನ್ನ ಮಾತುಗಳನ್ನು ಮಾತ್ರವಲ್ಲ, ಬೇರೆಯವರ ಮಾತುಗಳನ್ನು, ಹಕ್ಕಿಗಳ ಹಾಡನ್ನು, ರೇಲ್ವೆ ಎಂಜಿನ್ನಿನ ಸಿಳ್ಳೆಯನ್ನು, ಅಲ್ಲಿ ಹೋಗುತ್ತಿರುವ ಬಸ್ಸಿನ ಸದ್ದನ್ನು ಎಲ್ಲವನ್ನೂ ಹೀಗೆಯೇ ಕೇಳಿಸಿಕೊಳ್ಳಬೇಕು. ನೀವು ಎಲ್ಲವನ್ನೂ ಹೆಚ್ಚು ಹೆಚ್ಚು ಕೇಳಿಸಿಕೊಂಡಷ್ಟೂ ಸದ್ದಿನಿಂದ ಭಂಗಗೊಳ್ಳದ ಮಹಾ ಮೌನ ನಿಮ್ಮ ಅರಿವಿಗೆ ಬರುತ್ತದೆ. ನೀವು ಏನನ್ನಾದರೂ ಪ್ರತಿರೋಧಿಸುವಾಗ ಮಾತ್ರ, ನಿಮಗೆ ಕೇಳಿಸಿಕೊಳ್ಳಲು ಇಷ್ಟವಿರದಿದ್ದುದಕ್ಕೂ ನಿಮಗೂ ನಡುವೆ ಅಡ್ಡಗೋಡೆಯನ್ನು ಕಟ್ಟಿಕೊಳ್ಳಲು ಬಯಸಿದಾಗ ಮಾತ್ರ ಮನಸ್ಸಿನಲ್ಲಿ ಸಂಘರ್ಷ ಹುಟ್ಟಿಕೊಳ್ಳುತ್ತದೆ.

ಕೇವಲ ಹೊರಗೆ ಮಾತ್ರವಲ್ಲ ಒಳಗೂ ನಾಜೂಕಾಗಿರುವುದು (ರೀಫೈನ್‌ಮೆಂಟ್) ಮುಖ್ಯವಲ್ಲವೇ ? ಈ ನಾಜೂಕು ಎಂದರೇನೆಂದು ನಿಮಗೆ ಗೊತ್ತೆ? ನಿಮ್ಮ ಸುತ್ತಲೂ ಇರುವ ಪ್ರತಿಯೊಂದರ ಬಗೆಗೂ, ಎಲ್ಲ ಆಲೋಚನೆ ಮತ್ತು ನಂಬಿಕೆಗಳ ಬಗೆಗೂ, ನಿಮ್ಮೊಳಗಿನ ಭಾವನೆಗಳ ಬಗೆಗೂ, ಸೂಕ್ಷ್ಮವಾದ ಸಂವೇದನೆಯನ್ನು ಹೊಂದಿರುವುದು ನಿಜವಾದ ರೀಫೈನ್‌ಮೆಂಟ್. ನಿಮ್ಮ ಉಡುಪುಗಳಲ್ಲಿ, ನಿಮ್ಮ ವರ್ತನೆಯಲ್ಲಿ, ನಿಮ್ಮ ದೇಹದ ಭಂಗಿಗಳಲ್ಲಿ, ನೀವು ನಡೆಯುವ ರೀತಿಯಲ್ಲಿ, ನಿಮ್ಮ ಮಾತಿನಲ್ಲಿ, ಬೇರೆಯವರನ್ನು ನೀವು ನೋಡುವ ಬಗೆಯಲ್ಲಿ ಈ ನಾಜೂಕು, ರೀಫೈನ್‌ಮೆಂಟ್ ವ್ಯಕ್ತವಾಗುತ್ತದೆ. ಈ ರೀಫೈನ್‌ಮೆಂಟ್ ಅತ್ಯಗತ್ಯ. ಅಲ್ಲವೇ ? ಈ ರೀಫೈನ್‌ಮೆಂಟ್ ಇರದಿದ್ದರೆ ಕೊಳೆಯತೊಡಗುತ್ತೇವೆ.

ಕೊಳೆಯುವುದೇನೆಂದು ಗೊತ್ತೆ? ಅದು ಸೃಷ್ಟಿಸುವ, ನಿರ್ಮಿಸುವ, ಕಟ್ಟುವ, ಮುಂದೆ ಸಾಗುವ, ವಿಕಾಸ ಹೊಂದುವ ಉತ್ಸಾಹಕ್ಕೆ ವಿರುದ್ಧವಾದ ಸ್ಥಿತಿ. ನಿಧಾನವಾಗಿ ಕೊಳೆಯುವ, ಒಣಗಿ ಹೋಗುವ ಸ್ಥಿತಿ. ಜಗತ್ತಿನಲ್ಲಿ ಈಗ ಸಂಭವಿಸುತ್ತಿರುವುದು ಅದೇ. ಕಾಲೇಜು ವಿಶ್ವವಿದ್ಯಾಲಯಗಳಲ್ಲಿ, ರಾಷ್ಟ್ರಗಳಲ್ಲಿ, ಜನತೆಯಲ್ಲಿ, ವ್ಯಕ್ತಿಗಳಲ್ಲಿ ನಿಧಾನವಾಗಿ ಕೊಳೆಯುವ ಸ್ಥಿತಿ ಕಾಣಬರುತ್ತಿದೆ. ಒಳಗಿನ ನಾಜೂಕು ಇಲ್ಲದ್ದರಿಂದ ಈ ಕೊಳೆಯುವ ಕಾರ್ಯ ಎಲ್ಲ ಕಾಲದಲ್ಲೂ ನಡೆಯುತ್ತಲೇ ಬಂದಿದೆ. ನಿಮ್ಮಲ್ಲಿ ತಕ್ಕಮಟ್ಟಿನ ಹೊರಗಿನ ನಾಜೂಕು ಇರಬಹುದು. ಒಳ್ಳೆಯ ಬಟ್ಟೆ ತೊಡಬಹುದು. ದೊಡ್ಡ ಮನೆ ಇರಬಹುದು, ಒಳ್ಳೆಯ ಆಹಾರ ಸೇವಿಸಬಹುದು, ಅತ್ಯಂತ ಸ್ವಚ್ಛವಾಗಿಯೂ ಇರಬಹುದು. ಆದರೆ, ಒಳಗಿನ ನಾಜೂಕು ಇಲ್ಲದೆ ಹೊರಗೆ ಎಷ್ಟು ಪರಿಷ್ಕೃತರಾದರೂ ಅದಕ್ಕೆ ಅರ್ಥವಿಲ್ಲ. ಅದು ಕೊಳೆತದ ಇನ್ನೊಂದು ಬಗೆ, ಅಷ್ಟೇ. ಸುಂದರವಾದ ವಸ್ತುಗಳನ್ನು ಪಡೆದಿದ್ದು ಒಳಗೆ ನಾಜೂಕಿಲ್ಲದೆ ಸ್ಥೂಲವಾಗಿದ್ದರೆ ಅದು

ನಿಮ್ಮ ಒಣ ಅಹಂಕಾರ, ಡಂಬಾಚಾರ, ಮಹತ್ವಾಕಾಂಕ್ಷೆ, ಸಾಧನೆಯ ಆಸೆಗಳ ಪ್ರತಿಬಿಂಬವಾಗಿರುತ್ತದೆ, ಕೊಳೆಯುವ ಒಂದು ಬಗೆಯಾಗಿರುತ್ತದೆ.

ಕಾವ್ಯದ ರೂಪದಲ್ಲಿ, ವ್ಯಕ್ತಿಯ ರೂಪದಲ್ಲಿ, ಸುಂದರವಾದ ಮರದಲ್ಲಿ ಒಂದು ಬಗೆಯ ಚೆಲುವು ಇರುತ್ತದೆ. ಆದರೆ ಒಳಗಿನ ಪ್ರೀತಿ ಇದ್ದರೆ ಮಾತ್ರ, ಪ್ರೀತಿಯ ನಾಜೂಕು ಇದ್ದರೆ ಮಾತ್ರ, ಈ ಹೊರಗಿನ ಚೆಲುವಿಗೆ ಒಂದು ಅರ್ಥ. ಪ್ರೀತಿ ಇದ್ದದ್ದೇ ಆದರೆ ಒಳಗಿನ ಮತ್ತು ಹೊರಗಿನ ನಾಜೂಕು ಇರುತ್ತದೆ. ಇತರರನ್ನು ನೀವು ಕಾಣುವ ರೀತಿ, ಅಪ್ಪ ಅಮ್ಮಂದಿರನ್ನು, ಸೇವಕರನ್ನು ನಡೆಸಿಕೊಳ್ಳುವ ರೀತಿ, ತೋಟದ ಮಾಲಿಯೊಡನೆ ವ್ಯವಹರಿಸುವ ರೀತಿ ಇವುಗಳಲ್ಲೆಲ್ಲ ನಾಜೂಕು ವ್ಯಕ್ತವಾಗುತ್ತದೆ. ನಿಮ್ಮ ಮಾಲಿ ಅದ್ಭುತವಾದ ತೋಟವನ್ನು ನಿರ್ಮಿಸಿರಬಹುದು. ಆದರೆ, ಪ್ರೀತಿ ಎಂಬ ನಾಜೂಕು ಇರದಿದ್ದರೆ ಆ ತೋಟವು ನಿಮ್ಮ ಒಣ ಅಹಂಕಾರದ, ಪ್ರತಿಷ್ಠೆಯ ಇನ್ನೊಂದು ರೂಪವಾಗಿರುತ್ತದೆ.

ಆದ್ದರಿಂದಲೇ ಅಂತರಂಗದ ಮತ್ತು ಬಹಿರಂಗದ ನಾಜೂಕುಗಳೆರಡೂ ಅಗತ್ಯ. ನೀವು ಹೇಗೆ ಊಟ ಮಾಡುತ್ತೀರೆನ್ನುವುದೂ ಮುಖ್ಯವೇ. ಊಟ ಮಾಡುವಾಗ ಸದ್ದು ಮಾಡಿಕೊಂಡು ತಿಂದರೆ ಚೆನ್ನಾಗಿರುವುದಿಲ್ಲ. ನೀವು ಹೇಗೆ ವರ್ತಿಸುತ್ತೀರಿ, ಗೆಳೆಯರೊಡನೆ ಹೇಗೆ ಇರುತ್ತೀರಿ, ಬೇರೆಯವರೊಡನೆ ಹೇಗೆ ನಡೆದುಕೊಳ್ಳುತ್ತೀರಿ ಎಂಬುದೆಲ್ಲವೂ ಮುಖ್ಯವೇ. ಏಕೆಂದರೆ ಈ ಎಲ್ಲ ಸಂಗತಿಗಳು ನಿಮ್ಮ ಒಳಗಿನ ನಾಜೂಕನ್ನು ತೋರಿಸುತ್ತವೆ. ಒಳಗೆ ನಾಜೂಕು ಇರದಿದ್ದರೆ ಹೊರಗಿನ ವರ್ತನೆಗಳು ಅಂದಗೆಡುತ್ತವೆ. ಅಂತೆಯೇ ಒಳಗೆ ಪ್ರೀತಿ ಇರದಿದ್ದರೆ ಹೊರಗಿನ ನಾಜೂಕಿಗೆ ಹೆಚ್ಚು ಅರ್ಥವಿಲ್ಲ. ಪ್ರೀತಿ ಎಂಬುದು ನಾವು ಸಂಪಾದಿಸಿಕೊಳ್ಳಬಹುದಾದ ವಸ್ತುವಲ್ಲ. ಮನಸ್ಸು ತಾನು ಸೃಷ್ಟಿಸಿರುವ ಸಂಕೀರ್ಣ ಸಮಸ್ಯೆಗಳನ್ನು ತಾನೇ ಅರ್ಥಮಾಡಿಕೊಂಡಾಗ ಪ್ರೀತಿ ತಾನಾಗಿಯೇ ಇರುತ್ತದೆ.

ಪ್ರಶ್ನೆ: ನಾವು ಯಶಸ್ಸು ಗಳಿಸಿದಾಗ ಜಂಬದ, ಹೆಮ್ಮೆಯ ಭಾವ ಮೂಡುವುದೇಕೆ?

ಕೃಷ್ಣಮೂರ್ತಿ: ಯಶಸ್ಸಿನೊಡನೆ ಹೆಮ್ಮೆಯ ಭಾವ ಇರುತ್ತದೆಯೇ? ಯಶಸ್ಸೆಂದರೆ ಏನು? ಕವಿಯಾಗಿ, ಲೇಖಕನಾಗಿ, ವ್ಯವಹಾರಸ್ಥನಾಗಿ, ಚಿತ್ರಕಾರನಾಗಿ, ರಾಜಕಾರಣಿಯಾಗಿ ಯಶಸ್ವಿಯಾಗುವುದೆಂದರೆ ಏನೆಂದು ಗೊತ್ತೆ? ಇತರರಿಗೆ ಸಾಧ್ಯವಾಗದ ಒಂದು ಬಗೆಯ ಒಳ ನಿಯಂತ್ರಣವನ್ನು ನೀನು ಸಾಧಿಸಿರುವೆ, ಅಥವ

ಇತರರು ವಿಫಲವಾದ ಎಡೆಯಲ್ಲಿ ನೀನು ಗೆದ್ದಿರುವೆ ಎಂಬ ಭಾವ ಅದು. ನೀನು ಇತರರಿಗಿಂತ ಉತ್ತಮ, ನಿನಗೆ ಈಗ ಗೌರವ ದೊರೆಯುತ್ತದೆ, ಇತರರು ನಿನ್ನನ್ನು ಒಂದು ನಿದರ್ಶನವೆಂದು ಭಾವಿಸುತ್ತಾರೆ ಎಂಬ ಭಾವ ಅದು. ಇದೆಲ್ಲ ಏನನ್ನು ಸೂಚಿಸುತ್ತದೆ? ನಿನ್ನಲ್ಲಿ ಈ ಭಾವಗಳಿದ್ದಾಗ ಸಹಜವಾಗಿಯೇ ಹೆಮ್ಮೆ ಎನಿಸುತ್ತದೆ. 'ನಾನು' ಏನೋ ಮಾಡಿದ್ದೇನೆ, 'ನಾನು' ಮುಖ್ಯನಾದ ವ್ಯಕ್ತಿ, ಅನಿಸುತ್ತದೆ. ಈ 'ನಾನು' ಎಂಬ ಭಾವವೇ ಅಹಂಕಾರದ ಅರ್ಥ. ಯಶಸ್ಸಿನೊಂದಿಗೆ ಅಹಂಕಾರವೂ ಬೆಳೆಯುತ್ತದೆ. ಇತರರಿಗೆ ಹೋಲಿಸಿದರೆ ನಾನು ಮುಖ್ಯ ಎನಿಸುತ್ತದೆ. ಯಾವುದೋ ಆದರ್ಶವನ್ನೋ ನಿದರ್ಶನವನ್ನೋ ಹಿಂಬಾಲಿಸುವಾಗ ಕೂಡ ಇತರರೊಡನೆ ಮಾಡಿಕೊಳ್ಳುವ ಹೋಲಿಕೆ ನಿನಗೆ ಭರವಸೆಯನ್ನು, ಆಸೆಯನ್ನು, ಉತ್ಸಾಹವನ್ನು ತುಂಬುತ್ತ ನಿನ್ನೊಳಗಿನ 'ನಾನು' ಎಂಬ ಭಾವವನ್ನು ಗಟ್ಟಿಗೊಳಿಸುತ್ತದೆ. ನೀನು ಇತರರಿಗಿಂತ ಮುಖ್ಯ ಅನಿಸುತ್ತದೆ. ಆ ಭಾವವೇ, ಅದರಿಂದ ದೊರೆಯುವ ಸಂತೋಷವೇ ಅಹಂಕಾರದ, ಹೆಮ್ಮೆಯ ಆರಂಭ.

ಈ ಹೆಮ್ಮೆಯಿಂದ ನಿನ್ನಲ್ಲಿ ಒಂದು ಬಗೆಯ ಡಂಬಾಚಾರ ಬೆಳೆಯುತ್ತದೆ, ನಿನ್ನ ಅಹಂ ಉಬ್ಬುತ್ತದೆ. ಇದನ್ನು ನಿನ್ನ ಹಿರಿಯರಲ್ಲೂ ನಿನ್ನೊಳಗೂ ಕಂಡುಕೊಳ್ಳಬಹುದು. ನೀನು ಪರೀಕ್ಷೆಯನ್ನು ಪಾಸು ಮಾಡಿ ಇತರರಿಗಿಂತ ಕೊಂಚ ಹೆಚ್ಚು ಜಾಣ ಅಂದುಕೊಂಡಾಗ ಸಂತೋಷದ ಭಾವ ಹುಟ್ಟುತ್ತದಲ್ಲ, ವಾದದಲ್ಲಿ ಮತ್ತೊಬ್ಬರನ್ನು ಸೋಲಿಸಿದಾಗ, ಬೇರೆಯವರಿಗಿಂತ ನೀನು ಶಕ್ತಿಯಲ್ಲಿ, ಚೆಲುವಿನಲ್ಲಿ ಮಿಗಿಲಾದವನು ಅನಿಸಿದಾಗ ನಿನ್ನ ಪ್ರಾಮುಖ್ಯದ ಬಗ್ಗೆ ಹೆಮ್ಮೆ ಹುಟ್ಟುತ್ತದಲ್ಲ, ಆ 'ನಾನು' ಎಂಬ ಭಾವವೇ ಸಂಘರ್ಷ, ಹೋರಾಟ, ನೋವುಗಳನ್ನೂ ತರುತ್ತದೆ. ಏಕೆಂದರೆ ನಿನ್ನ ಪ್ರಾಮುಖ್ಯವನ್ನು ಸದಾ ಉಳಿಸಿಕೊಳ್ಳುವ ಜವಾಬ್ದಾರಿ ನಿನ್ನದು ಎಂದು ಭಾವಿಸುತ್ತೀಯೆ.

ಪ್ರಶ್ನೆ: ಈ ಹೆಮ್ಮೆ, ಅಹಂಕಾರಗಳಿಂದ ಬಿಡುಗಡೆ ಪಡೆಯುವುದು ಹೇಗೆ?

ಕೃಷ್ಣಮೂರ್ತಿ : ಹಿಂದಿನ ಪ್ರಶ್ನೆಗೆ ಉತ್ತರವನ್ನು ಕೇಳಿಸಿಕೊಂಡಿದ್ದರೆ ಅಹಂಕಾರದಿಂದ, ಹೆಮ್ಮೆಯಿಂದ ಬಿಡುಗಡೆ ಪಡೆಯುವುದು ಹೇಗೆಂದು ನಿನಗೆ ತಿಳಿಯುತ್ತಿತ್ತು. ಹೆಮ್ಮೆಯಿಂದ ಬಿಡುಗಡೆ ಪಡೆಯುತ್ತಿದ್ದೆ. ಆದರೆ ನೀನು ನಿನ್ನ ಮುಂದಿನ ಪ್ರಶ್ನೆಯನ್ನು ಕೇಳುವುದು ಹೇಗೆಂದು ಯೋಚಿಸುತ್ತಿದ್ದೆ, ಅಲ್ಲವೇ ? ನೀನು ಕೇಳಿಸಿಕೊಳ್ಳುತ್ತಿರಲಿಲ್ಲ. ಹೇಳುತ್ತಿರುವುದನ್ನು ಸರಿಯಾಗಿ ಕೇಳಿಸಿಕೊಂಡರೆ ಅದರ ಸತ್ಯವನ್ನು ನೀನೇ ಕಂಡುಕೊಳ್ಳುತ್ತೀಯೆ.

ನಾನು ಏನನ್ನೋ ಸಾಧಿಸಿದ್ದೇನೆಂದು ಹೆಮ್ಮೆಪಡುತ್ತಿದ್ದೇನೆ ಎಂದಿಟ್ಟುಕೊಳ್ಳೋಣ. ನಾನು ಪ್ರಿನ್ಸಿಪಾಲನಾಗಿರಬಹುದು. ಇಂಗ್ಲೆಂಡಿಗೋ ಅಮೆರಿಕಕ್ಕೋ ಹೋಗಿ ಬಂದಿರಬಹುದು. ಮಹಾನ್ ಕಾರ್ಯಗಳನ್ನು ಮಾಡಿರಬಹುದು. ನನ್ನ ಫೋಟೋ ಪೇಪರುಗಳಲ್ಲಿ ಬಂದಿರಬಹುದು. ಇತ್ಯಾದಿ ಕಾರಣಗಳಿವೆ ಅಂದುಕೊಳ್ಳೋಣ. ಹೆಮ್ಮೆಯನ್ನು ಪಡುತ್ತಲೇ 'ಹೆಮ್ಮೆಯಿಂದ ಬಿಡುಗಡೆ ಪಡೆಯುವುದು ಹೇಗೆ?' ಎಂದು ಕೇಳಿಕೊಳ್ಳುತ್ತೇನೆ.

ಹೆಮ್ಮೆಯಿಂದ ಬಿಡುಗಡೆಯನ್ನು ಏಕೆ ಪಡೆಯಬೇಕು? ಇದು ಮುಖ್ಯವಾದ ಪ್ರಶ್ನೆಯೇ ಹೊರತು ಹೆಮ್ಮೆಯಿಂದ ಬಿಡುಗಡೆಯನ್ನು ಪಡೆಯುವುದು ಹೇಗೆ ಎಂಬುದಲ್ಲ. ಹೆಮ್ಮೆಯಿಂದ ಮುಕ್ತನಾಗುವುದಕ್ಕೆ ಇರುವ ಕಾರಣವೇನು, ಪ್ರಚೋದನೆಯೇನು? ಹೆಮ್ಮೆ ನನಗೆ ಹಾನಿಯನ್ನುಂಟುಮಾಡುತ್ತದೆ, ನೋವು ತರುತ್ತದೆ, ಆಧ್ಯಾತ್ಮಿಕವಾಗಿ ಒಳ್ಳೆಯದಲ್ಲ ಎಂದೇ? ಹೌದಾದರೆ, ಇದೇ ಪ್ರಚೋದನೆಯಾಗಿದ್ದರೆ, ಹೆಮ್ಮೆಯಿಂದ ಮುಕ್ತನಾಗುವುದೇ ಇನ್ನೊಂದು ಬಗೆಯ ಹೆಮ್ಮೆಯಾಗುತ್ತದೆ, ಅಲ್ಲವೇ? ಸಾಧನೆಯ ಬಗ್ಗೆ ಇರುವ ಆಸಕ್ತಿ ಇನ್ನೂ ನನ್ನಲ್ಲಿ ಹೋಗಿಲ್ಲ ಎಂದಾಗುತ್ತದೆ. ಹೆಮ್ಮೆಯಿಂದ ಮನಸ್ಸಿಗೆ ನೋವಾಗುತ್ತದೆಂದು ತಿಳಿದು. ಹೆಮ್ಮೆಯು ಆಧ್ಯಾತ್ಮಿಕವಾಗಿ ಒಂದು ವಿಕೃತಿ, ವಿಕಾರವೆಂದು ತಿಳಿದು ಅದರಿಂದ ಮುಕ್ತನಾಗಬೇಕೆಂದು ಬಯಸುತ್ತೇನೆ. 'ನಾನು ಹೆಮ್ಮೆಯಿಂದ ಮುಕ್ತನಾಗಬೇಕು' ಎಂಬುದಕ್ಕೂ 'ನಾನು ಏನೋ ಮಹತ್ವದ್ದನ್ನು ಸಾಧಿಸಬೇಕು' ಎಂಬುದಕ್ಕೂ ಇರುವ ಪ್ರಚೋದನೆ ಒಂದೇ ಆಗಿರುತ್ತದೆ. 'ನಾನು' ಎಂಬುದೇ ಮುಖ್ಯವಾಗಿರುತ್ತದೆ, ಮುಕ್ತನಾಗಿರಬೇಕೆಂಬ ಹೋರಾಟದ ಕೇಂದ್ರವಾಗಿರುತ್ತದೆ.

ಈ 'ನಾನು' ಎಂಬುದನ್ನು ಅರ್ಥಮಾಡಿಕೊಳ್ಳುವುದು ಮುಖ್ಯವೇ ಹೊರತು ಹೆಮ್ಮೆಯಿಂದ ಮುಕ್ತನಾಗುವುದು ಹೇಗೆ ಎಂಬುದು ಮುಖ್ಯವಲ್ಲ. 'ನಾನು' ಎಂಬುದು ಬಲು ಸೂಕ್ಷ್ಮ. ಅದು ಈ ವರ್ಷ ಒಂದನ್ನು ಬಯಸಿದರೆ ಮುಂದಿನ ವರ್ಷ ಮತ್ತೊಂದನ್ನು ಬಯಸುತ್ತದೆ. ಅದು ನೋವು ತಂದರೆ ಮತ್ತೆ ಇನ್ನೊಂದನ್ನು ಬೇಡುತ್ತದೆ. ಈ 'ನಾನು' ಎಂಬ ಕೇಂದ್ರ ಇರುವವರೆಗೆ ನಾನು ಅಹಂಕಾರಿಯಾಗಿದ್ದರೂ ಅಷ್ಟೇ, ವಿನಯವಂತ ಎನ್ನುತ್ತಾರಲ್ಲ, ಹಾಗೆ ಇದ್ದರೂ ಅಷ್ಟೆ. ವ್ಯತ್ಯಾಸವೇನೂ ಇಲ್ಲ. ಹೆಮ್ಮೆ, ವಿನಯ ಎರಡೂ 'ನಾನು' ಹಾಕಿಕೊಳ್ಳುವ ಬೇರೆ ಬೇರೆ ಅಂಗಿಗಳು. ಈ ಅಂಗಿ ಇಷ್ಟವಾದಾಗ ಇದು. ಮತ್ತೊಂದು ಅಂಗಿ ಇಷ್ಟವಾದಾಗ ಅದು. ಒಮ್ಮೆ ವಿನಯವಂತ, ಮತ್ತೊಮ್ಮೆ ಅಹಂಕಾರಿ!

ಈ 'ನಾನು' ಎಂಬುದು ಹೇಗೆ ಅಸ್ತಿತ್ವಕ್ಕೆ ಬರುತ್ತದೆಂಬುದನ್ನು ನೀನು ತಿಳಿಯಬೇಕು. ಬಗೆಬಗೆಯ ಸಾಧನೆಗಳ ಭಾವದಿಂದ ಈ 'ನಾನು' ಎಂಬುದು ಮೂಡುತ್ತದೆ. ಅಂದರೆ, ನೀನು ಏನೂ ಮಾಡದೆ, ಕ್ರಿಯಾಶೀಲನಾಗದೆ ಸುಮ್ಮನಿರಬೇಕು ಎಂದರ್ಥವಲ್ಲ. ಆದರೆ 'ನಾನು' ಏನೋ ಮಾಡುತ್ತಿದ್ದೇನೆ, 'ನಾನು' ಏನೋ ಸಾಧಿಸುತ್ತಿದ್ದೇನೆ, 'ನಾನು' ಅಹಂಕಾರಪಡಬಾರದು ಎಂಬ ಭಾವವಿರುತ್ತದಲ್ಲ, ಅದನ್ನು ಅರ್ಥಮಾಡಿಕೊಳ್ಳಬೇಕು. ನಿನ್ನ ಎಲ್ಲ ಆಲೋಚನೆಗಳ ಬಗ್ಗೆ ಎಚ್ಚರವಾಗಿರಬೇಕು. ನಿನ್ನ ಸೇವಕನನ್ನು, ನಿನ್ನ ತಾಯಿಯನ್ನು, ನಿನ್ನ ತಂದೆಯನ್ನು, ಮೇಷ್ಟರನ್ನು ಹೇಗೆ ನಡೆಸಿಕೊಳ್ಳುತ್ತೀಯೆ ಎಂಬುದನ್ನು, ನಿನಗಿಂತ ಮೇಲಿನವರು ಮತ್ತು ಕೆಳಗಿನವರ ಬಗ್ಗೆ ಯಾವ ಭಾವ ನಿನ್ನಲ್ಲಿದೆ ಎಂಬುದನ್ನು, ನೀವು ಗೌರವಿಸುವ ಮತ್ತು ಅಸಹ್ಯಪಡುವ ವ್ಯಕ್ತಿಗಳನ್ನು ಹೇಗೆ ಕಾಣುತ್ತೀಯೆ ಎಂಬುದನ್ನು ಎಚ್ಚರದಿಂದ ಗಮನಿಸಿಕೊಳ್ಳಬೇಕು. ಇವೆಲ್ಲವೂ 'ನಾನು' ಎಂಬುದು ವರ್ತಿಸುವ ದಾರಿಗಳನ್ನು ನಿನಗೇ ತೋರಿಸಿಕೊಡುತ್ತವೆ. 'ನಾನು' ವರ್ತಿಸುವ ದಾರಿಗಳನ್ನು, ಬಗೆಗಳನ್ನು ಅರಿಯುವುದರಿಂದಲೇ 'ನಾನು' ಎಂಬುದರಿಂದ ಬಿಡುಗಡೆಯೂ ದೊರೆಯುತ್ತದೆ. ಅದು ಮುಖ್ಯವೇ ಹೊರತು ಅಹಂಕಾರದಿಂದ ಹೇಗೆ ಬಿಡುಗಡೆ ಪಡೆಯುವುದು ಎಂಬುದಲ್ಲ.

ಪ್ರಶ್ನೆ: ಎ ಥಿಂಗ್ ಆಫ್ ಬ್ಯೂಟಿ ಈಸ್ ಎ ಜಾಯ್ ಫಾರ್ ಎವರ್, ಸೌಂದರ್ಯ ತುಂಬಿದ ವಸ್ತು ಸದಾ ಕಾಲಕ್ಕೂ ಆನಂದ ನೀಡುತ್ತದೆ ಎನ್ನುತ್ತಾರಲ್ಲ, ಅದು ಹೇಗೆ?.

ಕೃಷ್ಣಮೂರ್ತಿ : ಇದು ನಿನ್ನ ಸ್ವಂತ ಆಲೋಚನೆಯೋ, ಅಥವ ಬೇರೆಯವರು ಹೇಳಿದ ಕೊಟೇಶನ್ನೋ? ಸೌಂದರ್ಯವು ನಾಶವಾಗುತ್ತದೆ, ಶಾಶ್ವತವಾದ ಸಂತೋಷ ಇರಲು ಸಾಧ್ಯವೇ ಎಂದು ತಿಳಿಯಲು ಬಯಸಿದ್ದೀಯೇನು?

ಪ್ರಶ್ನೆ: ಸೌಂದರ್ಯವು ಹಲವು ರೂಪಗಳಲ್ಲಿ ಒದಗಿ ಬರುತ್ತದೆ.

ಕೃಷ್ಣಮೂರ್ತಿ : ಮರ, ಎಲೆ, ನದಿ, ಗಂಡಸು, ಹೆಂಗಸು, ತಲೆಯ ಮೇಲೆ ಹೊರೆಯನ್ನು ಹೊತ್ತು ಸುಂದರವಾಗಿ ನಡೆದುಹೋಗುತ್ತಿರುವ ಹಳ್ಳಿಗರು-ಸೌಂದರ್ಯ ನಶಿಸುತ್ತದೆಯೆ ?

ಪ್ರಶ್ನೆ: ಹಳ್ಳಿಗರು ನಡೆದು ಹೋಗುತ್ತಾರೆ. ಆದರೆ ಸೌಂದರ್ಯದ ಭಾವವನ್ನು ಮನಸ್ಸಿನಲ್ಲಿ ಮೂಡಿಸುತ್ತಾರೆ.

ಕೃಷ್ಣಮೂರ್ತಿ : ಅವರು ನಡೆದು ಹೋಗುತ್ತಾರೆ. ಆದರೆ ಅವರು ನಡೆದುಹೋದದ್ದರ ನೆನಪು ಉಳಿದಿರುತ್ತದೆ. ಮರವನ್ನು, ಎಲೆಯನ್ನು ನೋಡುತ್ತೀಯೆ. ಆ ಸೌಂದರ್ಯದ ನೆನಪು ಉಳಿದಿರುತ್ತದೆ.

ಸೌಂದರ್ಯದ ನೆನಪು ಜೀವಂತವಾದದ್ದೇ ? ಸುಂದರವಾದದ್ದನ್ನು ನೋಡಿದಾಗ ತಕ್ಷಣವೇ ಆನಂದವಾಗುತ್ತದೆ. ಸೂರ್ಯಾಸ್ತವನ್ನು ನೋಡಿದ ಕೂಡಲೇ ಸಂತೋಷವೆಂಬ ಪ್ರತಿಕ್ರಿಯೆ ಹುಟ್ಟುತ್ತದೆ. ಕೆಲವು ಕ್ಷಣಗಳ ನಂತರ ಆ ಸಂತೋಷವು ನೆನಪು ಆಗಿಬಿಡುತ್ತದೆ. ಸಂತೋಷದ ನೆನಪುಜೀವಂತವಾದದ್ದೇ ? ಸೂರ್ಯಾಸ್ತವನ್ನು ಕಂಡು ನೀನು ಅನುಭವಿಸಿದ ಆನಂದದ ನೆನಪು ಜೀವಂತವಾದದ್ದೇ ? ಅದೊಂದು ಮೃತ ಮುದ್ರಿಕೆಯಲ್ಲವೇ ? ಸೂರ್ಯಾಸ್ತದ ಆ ಮೃತ ಮುದ್ರಿಕೆಯ ಮೂಲಕ ನೀನು ಸಂತೋಷನ್ನು ಮತ್ತೆ ಅನುಭವಿಸಲು ಬಯಸುತ್ತೀಯೆ. ಆದರೆ ನೆನಪೇ ಸ್ವತಃ ಸಂತೋಷವಲ್ಲ. ಅದು ನಿನಗೆ ಸಂತೋಷನ್ನು ನೀಡಿ ಇಲ್ಲವಾದ ಸಂಗತಿಯ ಒಂದು ಬಿಂಬ ಅಷ್ಟೇ. ಸೌಂದರ್ಯಕ್ಕೆ ಆ ಕ್ಷಣದಲ್ಲಿ ತೋರುವ ಪ್ರತಿಕ್ರಿಯೆಯಲ್ಲಿ ಸಂತೋಷವಿರುತ್ತದೆ. ಆದರೆ ನೆನಪು ನುಗ್ಗಿ ಬಂದು ಸಂತೋಷನ್ನು ಹಾಳುಮಾಡುತ್ತದೆ. ನೆನಪುಗಳ ಸಂಗ್ರಹವಿಲ್ಲದೆ ಸೌಂದರ್ಯಕ್ಕೆ ಸತತವಾಗಿ ತತ್‌ಕ್ಷಣದ ಪ್ರತಿಕ್ರಿಯೆ ನೀಡಲು ಸಾಧ್ಯವಾದರೆ ಆಗ ಮಾತ್ರ ಆನಂದವು ಶಾಶ್ವತವಾಗುವ ಸಾಧ್ಯತೆ ಇರುತ್ತದೆ.

ಆದರೆ ನೆನಪುಗಳ ಸಂಗ್ರಹದಿಂದ ಬಿಡಿಸಿಕೊಳ್ಳುವುದು ಸುಲಭದ ಕೆಲಸವಲ್ಲ. ಸಂತೋಷಕೊಡುವಂಥ ಏನನ್ನಾದರೂ ನೋಡಿದ ಕೂಡಲೇ ಅದನ್ನು ಹಿಡಿದಿಟ್ಟುಕೊಡಲು ಸಾಧ್ಯವಾಗುವಂಥ ನೆನಪನ್ನಾಗಿ ಪರಿವರ್ತಿಸಿಕೊಳ್ಳುತ್ತಿರುತ್ತೇವೆ. ಚೆಲುವಾದ ಮಗು, ಮರ, ಏನನ್ನಾದರೂ ನೋಡಿದ ಕೂಡಲೇ ಅಂಥ ಚೆಲುವು ಮತ್ತಷ್ಟು ಬೇಕೆನ್ನಿಸುತ್ತದೆ. ಮತ್ತಷ್ಟು ಬೇಕು ಎಂಬ ಬಯಕೆಯೇ ನೆನಪುಗಳ ಸಂಗ್ರಹಕ್ಕೆ ಕಾರಣವಾಗುತ್ತದೆ. ಮತ್ತಷ್ಟು ಬೇಕು ಎಂದು ಬಯಸುವಾಗಲೇ ಸಂತೋಷವನ್ನು ಛಿದ್ರಮಾಡಿರುತ್ತೇವೆ. ನೆನಪು ಶಾಶ್ವತವಾದ ಆನಂದವನ್ನು ಎಂದಿಗೂ ನೀಡಲಾರದು. ಸೌಂದರ್ಯಕ್ಕೆ, ಕುರೂಪಕ್ಕೆ, ಪ್ರತಿಯೊಂದು ಸಂಗತಿಗೆ, ನೆನಪುಗಳನ್ನು ಪ್ರಚೋದಿಸದ, ತತ್‌ಕ್ಷಣದ ಸಹಜ, ಸ್ವಚ್ಛಂದ ಪ್ರತಿಕ್ರಿಯೆ ಮಾತ್ರವೇ ಶಾಶ್ವತವಾದ ಆನಂದವಾಗಲು ಸಾಧ್ಯ. ಹೀಗಾಗುವುದಕ್ಕೆ ಅಂತರಂಗದ ಮತ್ತು ಬಹಿರಂಗದ ಸೂಕ್ಷ್ಮತೆ ಬೇಕು. ನಿಜವಾದ ಪ್ರೀತಿ ಬೇಕು.

ಪ್ರಶ್ನೆ: ಬಡವರು ಸಂತೋಷವಾಗಿರುತ್ತಾರೆ, ಶ್ರೀಮಂತರು ಅಸುಖಿಗಳಾಗಿರುತ್ತಾರೆ, ಏಕೆ ?

ಕೃಷ್ಣಮೂರ್ತಿ : ಬಡವರು ಸಂತೋಷವಾಗಿರುತ್ತಾರೆಯೇ ? ಅವರು ಹಾಡಬಹುದು, ಕುಣಿಯಬಹುದು, ಆದರೆ ಸಂತೋಷವಾಗಿರುತ್ತಾರೆಯೆ? ಸರಿಯಾದ ಆಹಾರವಿರುವುದಿಲ್ಲ, ಮೈಮುಚ್ಚುವ ಬಟ್ಟೆ ಸಾಕಷ್ಟಿರುವುದಿಲ್ಲ, ಸ್ವಚ್ಛತೆ

ಅಸಾಧ್ಯ, ವರ್ಷದ ಮುನ್ನೂರವತ್ತೈದು ದಿನವೂ ಬೆಳಗಿನಿಂದ ಸಂಜೆಯವರೆಗೆ ದುಡಿಯುತ್ತಲೇ ಇರಬೇಕು. ಅವರ ಬದುಕಿನಲ್ಲಿ ಆಗಾಗ ಸಂತೋಷದ ಕ್ಷಣಗಳು ಬರುತ್ತವೆ. ಆದರೆ ಅವರು ನಿಜವಾಗಿ ಸಂತೋಷವಾಗಿಲ್ಲ, ಅಲ್ಲವೇ ?

ಶ್ರೀಮಂತರು ಅಸುಖಿಗಳೇ ? ಅವರಲ್ಲಿ ಎಲ್ಲವೂ ಹೇರಳವಾಗಿದೆ. ಉನ್ನತ ಸ್ಥಾನಮಾನಗಳಿವೆ. ಊರೂರು ತಿರುಗುತ್ತಾರೆ. ಅವರು ಹತಾಶರಾದಾಗ, ತಾವು ಬಯಸಿದ್ದು ದೊರೆಯದಾದಾಗ ಅಸುಖಿಗಳಾಗುತ್ತಾರೆ.

ಸಂತೋಷವೆಂದರೆ ಏನು ? ನಾವು ಬಯಸಿದ್ದು ದೊರೆಯುವುದೇ ಸಂತೋಷವೆಂದು ಕೆಲವರು ಹೇಳುತ್ತಾರೆ. ನಿನಗೆ ಕಾರು ಬೇಕೆನಿಸುತ್ತದೆ. ಕಾರು ದೊರೆತರೆ ಸಂತೋಷವಾಗುತ್ತದೆ. ಕೊನೆಯಪಕ್ಷ ಕೆಲವು ಕಾಲವಾದರೂ ಸಂತೋಷವಾಗಿರುತ್ತೀಯೆ. ಸೀರೆ ಬೇಕೆನಿಸಿದರೂ, ಯೂರೋಪಿಗೆ ಪ್ರವಾಸ ಮಾಡಬೇಕೆನಿಸಿದರೂ ಅಷ್ಟೇ. ಬಯಸಿದ್ದು ದೊರೆತಾಗ ಸಂತೋಷವಾಗಿರುತ್ತೀಯೆ. ಅತ್ಯುತ್ತಮ ಜನಪ್ರಿಯ ಪ್ರೊಫೆಸರ್ ಆಗಬೇಕೆಂದು, ರಾಜಕಾರಣಿ ಆಗಬೇಕೆಂದು ಬಯಸಿ, ಅದು ನೆರವೇರಿದರೆ ಸಂತೋಷ, ಇಲ್ಲವಾದರೆ ದುಃಖ.

ಯಾವುದನ್ನು ನೀನು ಸಂತೋಷವೆಂದು ಕರೆಯುತ್ತೀಯೋ ಅದು ಬಯಸಿದ್ದನ್ನು ಪಡೆಯುವುದರಲ್ಲಿ, ಯಶಸ್ಸೋ ಉದಾತ್ತತೆಯೋ ಏನೇ ಇರಲಿ ಅದನ್ನು ಪಡೆಯುವುದರಲ್ಲಿದೆ. ಬಯಸಿದ್ದು ದೊರೆತರೆ, ನೆರವೇರಿದರೆ ಸಂತೋಷ, ಇಲ್ಲವಾದರೆ ಹತಾಶೆ, ಅಸುಖದ ಆರಂಭ.

ಈ ಪ್ರಶ್ನೆ ಕೇವಲ ಬಡವರು ಮತ್ತು ಶ್ರೀಮಂತರಿಗೆ ಸಂಬಂಧಿಸಿದ್ದಲ್ಲ, ನಮಗೆಲ್ಲರಿಗೂ ಸಂಬಂಧಿಸಿದ್ದು. ಶ್ರೀಮಂತರು ಮತ್ತು ಬಡವರು, ಎಲ್ಲರೂ ತಮಗಾಗಿ ಏನನ್ನೋ ಬಯಸುತ್ತಾರೆ. ಅವರ ಬಯಕೆಗೆ ಅಡ್ಡಿಯೊದಗಿದರೆ ಅಸುಖಿಗಳಾಗುತ್ತಾರೆ. ಬಡವರು ತಮಗೆ ಅಗತ್ಯವಿರುವುದನ್ನು, ತಾವು ಬಯಸಿದ್ದನ್ನು ಪಡೆಯಬಾರದು ಎಂದು ನನ್ನ ಮಾತಿನ ಅರ್ಥವಲ್ಲ. ಸಂತೋಷವೆಂದರೆ ಏನು ಎಂಬುದನ್ನು ಪರಿಶೀಲಿಸುತ್ತಿದ್ದೇವೆ. ಸಂತೋಷವೆನ್ನುವುದರ ಬಗ್ಗೆ ನೀನು ಎಚ್ಚರವಾಗಿರಲು ಸಾಧ್ಯವೇ ? ನೀನು ಸಂತೋಷವಾಗಿದ್ದೀಯೆ ಎಂದು ಸಂತೋಷವಿರುವ ಕ್ಷಣದಲ್ಲಿಯೇ ನಿನಗೆ ಗೊತ್ತಿರಲು ಸಾಧ್ಯವೇ ?

ಸಂತೋಷವಾಗಿರುವೆ ಎನ್ನಿಸಿದ ಕ್ಷಣದಲ್ಲಿಯೇ ಸಂತೋಷವೂ ಇಲ್ಲವಾಗುತ್ತದಲ್ಲವೇ ? ಸಂತೋಷವೂ ವಿನಯದಂತೆ. ನಾನು ವಿನಯವಂತ ಎಂದು ನಿನಗೆ ಅನ್ನಿಸಿದ ಕೂಡಲೇ ವಿನಯ ಇಲ್ಲವಾಗುತ್ತದೆ. ಸಂತೋಷವೂ ಹಾಗೆಯೇ.

ಸಂತೋಷದ ಬೆನ್ನುಹತ್ತಿ ಹೋಗಲು ಸಾಧ್ಯವಿಲ್ಲ. ಅದು ತಾನಾಗಿ ಬರುತ್ತದೆ, ಹುಡುಕಿದರೆ ಮಾಯವಾಗುತ್ತದೆ.

ಪ್ರಶ್ನೆ: ಅನೇಕ ವಿಷಯಗಳಲ್ಲಿ ಇಷ್ಟೊಂದು ಪ್ರಗತಿಯಾಗಿದ್ದರೂ ಭ್ರಾತೃತ್ವ ಏಕಿಲ್ಲ?

ಕೃಷ್ಣಮೂರ್ತಿ : ಪ್ರಗತಿ ಎಂದರೇನು?

ಪ್ರಶ್ನೆ: ವೈಜ್ಞಾನಿಕ ಪ್ರಗತಿ.

ಕೃಷ್ಣಮೂರ್ತಿ : ಎತ್ತಿನಗಾಡಿಯಿಂದ ಜೆಟ್ ವಿಮಾನದವರೆಗೆ-ಇದು ಪ್ರಗತಿ, ಅಲ್ಲವೇ? ಶತಮಾನಗಳ ಹಿಂದೆ ಕೇವಲ ಎತ್ತಿನಗಾಡಿ ಮಾತ್ರವಿತ್ತು. ಕಾಲಕ್ರಮದಲ್ಲಿ ಜೆಟ್ ವಿಮಾನವನ್ನು ಕಂಡುಹಿಡಿದಿದ್ದೇವೆ. ಅಂದರೆ, ಹಿಂದಿನ ಕಾಲದಲ್ಲಿ ಸಾರಿಗೆ ಬಹಳ ನಿಧಾನವಾಗಿತ್ತು, ಈಗ ಕೆಲವೇ ಗಂಟೆಗಳಲ್ಲಿ ಲಂಡನ್ನಿಗೆ ತಲುಪಬಹುದು. ನೈರ್ಮಲ್ಯ, ಸೂಕ್ತ ಆಹಾರಪೋಷಣೆ, ವೈದ್ಯಕೀಯ ಸೌಲಭ್ಯ ಇವುಗಳಿಂದ ದೈಹಿಕ ಆರೋಗ್ಯದ ವಿಚಾರದಲ್ಲಿಯೂ ದೊಡ್ಡ ಬೆಳವಣಿಗೆ ಆಗಿದೆ. ಇದೆಲ್ಲವೂ ವೈಜ್ಞಾನಿಕ ಪ್ರಗತಿ. ಆದರೂ ಭ್ರಾತೃತ್ವದ ವಿಚಾರದಲ್ಲಿ ನಾವು ಬೆಳವಣಿಗೆಯನ್ನೂ ಪ್ರಗತಿಯನ್ನೂ ಕಾಣುತ್ತಿಲ್ಲ.

ಭ್ರಾತೃತ್ವವೆನ್ನುವುದು ಪ್ರಗತಿಗೆ ಸಂಬಂಧಿಸಿದ ವಿಚಾರವೇ? 'ಪ್ರಗತಿ'ಯ ಅರ್ಥವನ್ನು ನಾವಿನ್ನೂ ತಿಳಿದಿಲ್ಲ. ಪ್ರಗತಿ ಎಂದರೆ ವಿಕಾಸ, ಕಾಲಕ್ರಮದಲ್ಲಿ ಏನನ್ನೋ ಸಾಧಿಸುವುದು. ನಾವು ಮಂಗಗಳಿಂದ ವಿಕಾಸಹೊಂದಿದ್ದೇವೆಂದು ವಿಜ್ಞಾನಿಗಳು ಹೇಳುತ್ತಾರೆ. ಅತ್ಯಂತ ಕೆಳಮಟ್ಟದ ಜೀವಿಗಳು ಮಿಲಿಯಗಟ್ಟಲೆ ವರ್ಷಗಳಲ್ಲಿ ವಿಕಾಸಹೊಂದಿ ಉನ್ನತ ಜೀವಿಗಳಾಗಿ, ಮನುಷ್ಯರಾಗಿದ್ದಾರೆಂದು ವಿಜ್ಞಾನಿಗಳು ಹೇಳುತ್ತಾರೆ. ಆದರೆ ಭ್ರಾತೃತ್ವವೆನ್ನುವುದು ಪ್ರಗತಿಗೆ ಸಂಬಂಧಿಸಿದ ವಿಚಾರವೇ? ಅದು ಕಾಲಕ್ರಮದಲ್ಲಿ ವಿಕಾಸಹೊಂದುತ್ತದೆಯೇ? ಕುಟುಂಬದ, ನಿರ್ದಿಷ್ಟ ಸಮಾಜದ, ರಾಷ್ಟ್ರದ ಐಕ್ಯತೆ ಎಂಬುದಿದೆ. ರಾಷ್ಟ್ರೀಯತೆಯ ಮುಂದಿನ ಹೆಜ್ಜೆ ಅಂತಾರಾಷ್ಟ್ರೀಯತೆ. ಅನಂತರ ಒಂದೇ ಜಗತ್ತು ಎಂಬ ಐಡಿಯಾ. ಈ ಒಂದೇ ಜಗತ್ತು ಎಂಬ ಐಡಿಯಾವನ್ನೇ ನಾವು ಭ್ರಾತೃತ್ವವೆನ್ನುತ್ತೇವೆ. ಆದರೆ, ಭ್ರಾತೃತ್ವವೆನ್ನುವುದು ವಿಕಾಸಕ್ಕೆ ಸಂಬಂಧಿಸಿದ ವಿಚಾರವೇ? ಕುಟುಂಬ, ಸಮುದಾಯ, ರಾಷ್ಟ್ರೀಯತೆ, ಅಂತಾರಾಷ್ಟ್ರೀಯತೆ, ಜಾಗತಿಕ ಐಕ್ಯ ಎಂಬ ಕ್ರಮದಲ್ಲಿ ಹಂತ ಹಂತವಾಗಿ, ನಿಧಾನವಾಗಿ

ಭ್ರಾತೃತ್ವದ ಭಾವವನ್ನು ಬೆಳೆಸಿಕೊಳ್ಳಲು ಸಾಧ್ಯವೇ? ಭ್ರಾತೃತ್ವವೆಂದರೆ ಪ್ರೀತಿಯೇ ಅಲ್ಲವೇ? ಪ್ರೀತಿಯನ್ನು ಹಂತ ಹಂತವಾಗಿ, ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ ಬೆಳೆಸಿಕೊಳ್ಳಲು ಆಗುತ್ತದೆಯೇ? ಪ್ರೀತಿಯು ಕಾಲಕ್ಕೆ ಸಂಬಂಧಿಸಿದ ವಿಚಾರವೇ? ನಾನು ಏನು ಹೇಳುತ್ತಿದ್ದೇನೆಂದು ಅರ್ಥವಾಗುತ್ತಿದೆಯೇ?

ಇನ್ನು ಹತ್ತು, ಮೂವತ್ತು, ನೂರು ವರ್ಷಗಳಲ್ಲಿ ಭ್ರಾತೃತ್ವ ಕಂಡುಬರುತ್ತದೆ ಎಂದು ಹೇಳಿದರೆ ಏನು ಅರ್ಥ? ನನ್ನಲ್ಲಿ ಈಗ ಪ್ರೀತಿಯ ಭಾವನೆ ಇಲ್ಲ, ಭ್ರಾತೃತ್ವ ಭಾವನೆ ಇಲ್ಲ ಎಂದೇ ಅಲ್ಲವೇ? 'ಭ್ರಾತೃತ್ವವನ್ನು ಬೆಳೆಸಿಕೊಳ್ಳುತ್ತೇನೆ, ಪ್ರೀತಿಸುತ್ತೇನೆ' ಎಂದರೆ ನಾನು ಪ್ರೀತಿಸುತ್ತಿಲ್ಲ, ನನ್ನಲ್ಲಿ ಭ್ರಾತೃತ್ವವಿಲ್ಲ ಎಂದೇ ವಾಸ್ತವವಾದ ಅರ್ಥ. ನಾನು 'ಏನೋ ಆಗುತ್ತೇನೆ' ಎಂದು ಭವಿಷ್ಯತ್ಕಾಲದಲ್ಲಿ ಯೋಚಿಸುವುದರ ಅರ್ಥ ನಾನು ಈಗ ಹಾಗಿಲ್ಲ ಎಂದಷ್ಟೆ. ಮುಂದೆ ಎಂದೋ ಭವಿಷ್ಯದಲ್ಲಿ ಭ್ರಾತೃತ್ವವನ್ನು ಬೆಳೆಸಿಕೊಳ್ಳುತ್ತೇನೆ ಎಂಬ ಕಲ್ಪನೆಯನ್ನು ಮನಸಿನಿಂದ ತೆಗೆದುಹಾಕಿದರೆ, ನನ್ನಲ್ಲಿ ಭ್ರಾತೃತ್ವ ಇಲ್ಲದಿರುವುದು ಕಾಣುತ್ತದೆ. ಆಗ ಏಕೆ ಹೀಗೆ ಎಂದು ಹುಡುಕಿಕೊಳ್ಳಲು ತೊಡಗುತ್ತೇನೆ.

ನಾನು ಏನಾಗಿದ್ದೇನೆಯೋ ಅದನ್ನು ನೋಡಿ ತಿಳಿದುಕೊಳ್ಳುವುದು ಮುಖ್ಯವೋ, ಮುಂದೆ ಎಂದೋ ಭವಿಷ್ಯದಲ್ಲಿ ಹೀಗಿರುತ್ತೇನೆ ಎಂದು ಕಲ್ಪಿಸಿಕೊಳ್ಳುವುದೋ? ನಾನು ಈಗ ಏನಾಗಿದ್ದೇನೆ ಅದನ್ನು ನೋಡಿಕೊಳ್ಳುವುದೇ ಮುಖ್ಯ. ಏಕೆಂದರೆ ಈಗ ಇರುವ ಸಂಗತಿಯ ಬಗ್ಗೆ ಈಗಲೇ ಏನಾದರೂ ಮಾಡಬಹುದು. ಮುಂದೆ ಹೀಗಿರುತ್ತೇನೆ ಎಂಬುದು ಭವಿಷ್ಯಕ್ಕೆ ಸೇರಿದ್ದು. ಭವಿಷ್ಯ ಅನಿಶ್ಚಿತ. ನನ್ನಲ್ಲಿ ಭ್ರಾತೃತ್ವ ಇಲ್ಲ, ನನ್ನಲ್ಲಿ ಪ್ರೀತಿ ಇಲ್ಲ ಎಂಬುದೇ ವಾಸ್ತವ. ಈ ವಾಸ್ತವದಿಂದ ನಾನು ಆರಂಭಿಸಬೇಕು. ಆಗ ಮಾತ್ರ ಇರುವ ವಾಸ್ತವದ ಬಗ್ಗೆ ಏನನ್ನಾದರೂ ತಕ್ಷಣವೇ ಮಾಡಲು ಸಾಧ್ಯ. ಭವಿಷ್ಯದಲ್ಲಿ ಏನೋ ಆಗುತ್ತೇವೆ, ಹೇಗೋ ಇರುತ್ತೇವೆ ಎಂದುಕೊಳ್ಳುವುದು ಐಡಿಯಲಿಸಂ, ಆದರ್ಶವಾದ. ಇರುವ ವಾಸ್ತವದಿಂದ ತಪ್ಪಿಸಿಕೊಳ್ಳುವವನೇ ಆದರ್ಶವಾದಿ. ವರ್ತಮಾನದಲ್ಲಿ ಬದಲಾಯಿಸಿಕೊಳ್ಳಬೇಕಾದ ವಾಸ್ತವದಿಂದ ಆತ ಪಲಾಯನಮಾಡುತ್ತಿರುತ್ತಾನೆ.

ಜೆ.ಕೆ. ಪುಸ್ತಕ ಮಾಲೆ ಪ್ರಕಟಣೆ

ಬೆಂಗಳೂರಿನ ಕೃಷ್ಣಮೂರ್ತಿ ಶಿಕ್ಷಣ ಕೇಂದ್ರವು ಜೆ.ಕೆ.ಯವರ ಪುಸ್ತಕಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಹೊಸ ವಿನ್ಯಾಸದೊಂದಿಗೆ ಸುಂದರವಾಗಿ ಪ್ರಕಟಿಸಲು ಆರಂಭಿಸಿದೆ. ಈಗಾಗಲೇ ಬಿಡುಗಡೆಯಾದ ಪುಸ್ತಕಗಳ ಮಾಹಿತಿ ಕೆಳಕಂಡಂತಿದೆ.

೧. **ಧ್ಯಾನ ಚಿಂತನ**
ಡಾ. ನಿ. ಮುರಾರಿ ಬಲ್ಲಾಳ

೨. **ಹಿಂಸೆಯನ್ನು ಮೀರಿ**
ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ

೩. **ಕ್ರಿಯೆ ಮತ್ತು ಸಂಬಂಧ**
ಬಿ.ಎ. ಸನದಿ

೪. **ಮೊದಲ ಹಾಗೂ ಕೊನೆಯ ಬಿಡುಗಡೆ**
ಶ್ರೀಮತಿ ರುಕ್ಮಿಣಿ ಕೃಷ್ಣಮೂರ್ತಿ

೫. **ಕಾಲ ಮತ್ತು ಕಾಲರಹಿತ**
ಶ್ರೀಮತಿ ವನಮಾಲಾ ರಂಗನಾಥ ರಾವ್

೬. **ಸಂಸ್ಕೃತಿ ಸಂಗತಿ**
ಪ್ರೊ. ಎಚ್.ಎಸ್. ರಾಘವೇಂದ್ರ ರಾವ್

೭. **ಧಾರ್ಮಿಕ ಜೀವನ ಮತ್ತು ಬದುಕಿನ ಕಲೆ**
ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ

೮. **ಅನುದಿನ ಚಿಂತನ**
ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ

೯. **ಬಾಳಿಗೊಂದು ಭಾಷ್ಯ - ಸಂಪುಟ ೧**
ಡಾ. ಮಹಾಬಲೇಶ್ವರರಾವ್

೧೦. **ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ**
ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ

೧೧. **ಶಿಕ್ಷಣ ಮತ್ತು ಜೀವನ**
ಡಾ. ಎಚ್.ಎಸ್. ರಾಘವೇಂದ್ರ ರಾವ್

೧೨. **ಭಯದಾಚೆಯ ಬದುಕು**
ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ

೧೩. **ದುಃಖಕ್ಕೆ ವಿದಾಯ**
ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ

೧೪. **ಸಂಘರ್ಷವಿರದ ಬದುಕಿಗಾಗಿ**
ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ

೧೫. **ಸಂಬಂಧವೆಂದರೇನು?**
ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ

೧೬. **ಜೆ.ಕೆ. ಜೀವನ ದರ್ಶನ**
ಲೇಖಕರು : ನಿ. ಮುರಾರಿ ಬಲ್ಲಾಳ

೧೭. **ಜೆ. ಕೃಷ್ಣಮೂರ್ತಿ - ಶಿಕ್ಷಣ**
(ದ್ವಿತೀಯ ಆವೃತ್ತಿ) ಎಸ್.ಡಿ. ಕಾಶೀಕರ

೧೮. **ತಿಳಿದುದೆಲ್ಲವ ಬಿಟ್ಟು...**
ಪ್ರೊ. ಜಿ. ವೆಂಕಟಸುಬ್ಬಯ್ಯ

೧೯. **ಬಾಳಿಗೊಂದು ಭಾಷ್ಯ - ಸಂಪುಟ ೨**
ಡಾ. ಮಹಾಬಲೇಶ್ವರ ರಾವ್

೨೦. **ಪ್ರೀತಿ ಎಂದರೇನು?**
ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ

ಪ್ರೀತಿ ಎಂದರೆ ಏನೆಂದು ತಕ್ಷಣಕ್ಕೆ ಹೇಳುವುದಕ್ಕೆ ಆಗುವುದಿಲ್ಲ. ಪ್ರೀತಿಯನ್ನು ಮಾತುಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಪ್ರೀತಿ ಇರುವುದು, ದೊರೆಯುವುದು ಸುಲಭವಲ್ಲ. ಆದರೂ ಪ್ರೀತಿ ಇಲ್ಲದಿದ್ದರೆ ಬದುಕು ಬರಡು.

- ಜೆ. ಕೃಷ್ಣಮೂರ್ತಿ

Philosophy / Religion

Price: 25 /-

Bangalore Education Centre
Krishnamurti Foundation India (KFI)